ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೧೧, ಏಪ್ರಿಲ್ ೨೦೧೭

ನಮ್ಮ ಅಸ್ಮಿತೆಯು ಬೆಳಗಲಿ ...

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಯುಗಾದಿ ಹಬ್ಬ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೬

ರಾಂ ರಾಮ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ ... ಪು. ೧೪

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೬

ಸಿಡ್ನಿ ಸುದ್ದಿಗಳು

ಸಿಡ್ನಿ ಯುಗಾದಿ ಹಬ್ಬ – ೨

ಕರ್ನಾಟಕ ವೈಭವ – ೪

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಮನುಜನು ಸಂಘಜೀವಿಯೆಂಬುದು ಎಲ್ಲೆಡೆಯೂ ಕೇಳಿಬರುವ ಚಿರಪರಿಚಿತ ಮಾತು. ನಿಜ, ಈ ವಿಷಯದಲ್ಲಿ ವೈಜ್ಞಾನಿಕವಾಗಿಯೂ ಸಾಕಷ್ಟು ಅಧ್ಯಯನಗಳು ನಡೆದು ಹಲವಾರು ಉಪಯುಕ್ತ ಮಾಹಿತಿಗಳು ಎಲ್ಲೆಡೆಯೂ ಸಿಗುತ್ತವೆ. ಈ ಹಿನ್ನಲೆಯ ಮೂಲಕ ಓದುಗರಲ್ಲಿ ನಮ್ಮ ನಿಮ್ಮ ನಡುವೆ ಕಾಣಬಹುದಾದ ಇಂದಿನ ಸಮಾಜದ ಸ್ಥಿತಿಗತಿಗಳ ಬಗ್ಗೆ ಒಂದು ಅವಲೋಕನ ಮಾಡಿಕೊಳ್ಳುವ ಅವಶ್ಯಕತೆಯು ಇದೆ ಎನಿಸುತ್ತಿದೆ.

ಸಮಾಜ ಎಂದ ಮೇಲೆ ಒಬ್ಬರನ್ನೊಬ್ಬರು ಭೇಟಿಯಾಗಿ ಕುಶಲಗಳನ್ನು ಕೇಳಿಕೊಳ್ಳುವುದು ವಾಡಿಕೆ. ಸುಖ, ದುಃಖ, ದೂರು ದುಮ್ಮಾನ ಇತ್ಯಾದಿ ಮಾನವ ಸಹಜ ಸಂವೇದಿಗಳ ವಿನಿಮಯ ಒಂದು ಸುಸ್ಥಿತ ಸಮಾಜಕ್ಕೆ ಬೇಕೇ ಬೇಕು. ಅವು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದು ಈಗಲೂ ಪ್ರಚಲಿತದಲ್ಲಿದ್ದು, ಮುಂದೆಯೂ ಇರುವುದು. ಇವೆಲ್ಲದರ ನಡುವೆ ಇಂದಿನ ಸಮಾಜವು ಬಹುಷಃ ಕಳೆದುಕೊಳ್ಳುತ್ತಿರುವುದು, ಹಿಂದಿನ ತಲೆಮಾರಿನ ಒಂದು ಸಾಂಸ್ಕೃತಿಕ ಕೊಂಡಿಯನ್ನೇ ಎಂದರೆ ತಪ್ಪಾಗಲಾರದೇನೋ. ಇದು ಹಳತಾದ ಮಾತು. ಎಲ್ಲ ಕಾಲದಲ್ಲಿಯೂ ಇದು ಇದ್ದದ್ದೇ ಎಂದು ಮೂಗು ಮುರಿಯುವಿರಾದರೆ, ಅದು ಅವರರವರ ಸ್ವಾತ್ರಂತ್ರ್ಯ.

ಒಮ್ಮೆ ಯೋಚಿಸಿ ನೋಡೋಣ, ನಮ್ಮ ನಿಮ್ಮ ತಂದೆ ತಾಯಿ, ಅಜ್ಜ ಅಜ್ಜಿ ಹೇಳಿಕೊಳ್ಳುತ್ತಿದ್ದ ನಮ್ಮ ಭಾಷೆಯ ಎಷ್ಟು ನುಡಿಗಟ್ಟುಗಳು ನಮಗೆ ಬರುತ್ತದೆ, ಹಾಡು ಹಸೆ ಅಂತೂ ಕೇಳಲೇ ಬೇಡಿ. ಹಿಂದಿನ ಕಾಲದಲ್ಲಿದ್ದ ಆಚರಣೆ, ಜೀವನ ಪದ್ಧತಿ ಇತ್ಯಾದಿಗಳೆಲ್ಲ ನಮ್ಮಿಂದ ದೂರೇಕೆ ಆಗುತ್ತಿದೆ. ಅಧುನಿಕತೆಯೆಂಬ ಸೋಗಿನಲ್ಲಿ ಬೇಕಾದ್ದು ಬೇಡವಾದದ್ದು ಎಲ್ಲವನ್ನೂ ಸುಮ್ಮನೆ, ಯೋಚಿಸದೆ ಸ್ವೀಕರಿಸುತ್ತಿದ್ದೀವ! ಹಿಂದೆ,ಮನೆಯಲ್ಲಿ ಸೇರಿದಾಗಲೋ, ಅಥವಾ ಸಾರ್ವಜನಿಕ ಸ್ಥಳದಲ್ಲಿ ಸೇರಿದಾಗಲೋ, ಕಾಡುಹರಟೆಯು ಇದ್ದರೂ, ಎಲ್ಲೋ ಒಂದು ಕಡೆಯಲ್ಲಿ ಸಾಹಿತ್ಯ, ಭಾಷೆ, ಬದುಕು ಇತ್ಯಾದಿಗಳ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಅಂದಿನ ಪ್ರಚಲಿತ ಸಾಹಿತಗಳ, ಕವಿಗಳ, ಗಾಯಕರ ಬಗೆಗಿನ ಮಾಹಿತಿಯೂ ವಿನಿಮಯ ಆಗಿ, ಒಬ್ಬರಿಂದೊಬ್ಬರು ಸಾಕಷ್ಟು ತಿಳಿದುಕೊಳ್ಳುತ್ತಿದ್ದರು. ಈಗೀಗ ಎಲ್ಲರನ್ನೂ ಮೆಚ್ಚಿಸಬೇಕೆಂಬ ಹಪಾಹಪಿಯೇ ನಮ್ಮನ್ನು ಕಲುಷಿತರನ್ನಾಗಿ ಮಾಡುತ್ತಿದೆಯ! ಮನುಜನ ಏಳಿಗೆಗೆ ಬೇಕಾದ್ದನ್ನು ಬಿಟ್ಟು, ಮಿಕ್ಕೆಲ್ಲವನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿದ್ದೀವೇನೋ ಎಂದು ವ್ಯಾಕುಲವಾಗುತ್ತದೆ. ಮನೆ ಮನೆಗಳಲ್ಲಿ ಸೇರುವ ಸ್ನೇಹವರ್ಗದವರ ಜೊತೆ ಬಹುತೇಕ ಬಾರಿ, ಲೌಕಿಕವಾಗಿ (ಮನೆ, ಉದ್ಯೋಗ, ಅವರಿವರು ಇತ್ಯಾದಿ) ಹರಟುತ್ತೇವೆ ವಿನಃ ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಸಂಬಂಧವಿರುವ ವಿಷಯದ ಬಗೆಗಿನ ವಿಚಾರ ವಿನಿಮಯವು ಬಹಳ ಕಡಿಮೆಯೇ ಎಂದು ಅನಿಸುತ್ತದೆ.

ಓಹ್! ಇದೇನಿದು, ಬರಿ ದೂರಿನ ವಿಚಾರವೇ ಆಯಿತಲ್ಲ ಅಂತ ಭಾಸವಾಗಿದ್ದರೆ ನನಗೆ ವಿಷಾದವಿದೆ. ತಪ್ಪಿದ್ದರೆ ಕ್ಷಮಿಸಿ, ಒಪ್ಪಿತವಾಗಿದ್ದರೆ ಸ್ವೀಕರಿಸಿ ಎನ್ನುವ ನಮ್ರತೆಯೊಂದಿಗೆ, ಇತಿಹಾಸವನ್ನು ಅರಿತು, ಅದರ ಪ್ರಾಣ ಬೇರಿನಿಂದ ನಾವು ಚಿಗುರೋಣ, ಬರಿ ಹಸಿರು ಹಸಿರು ಎಂದು ಪ್ಲಾಸ್ಟಿಕ್ ಎಲೆಗಳನ್ನು ಚುಚ್ಚಿಸಿಕೊಂಡ ಮರವಾಗದಿರೋಣ. ನಮ್ಮ ಅಸ್ಮಿತೆಯು ಬೆಳಗಲಿ ...▪

ಎರಡು ತಿಂಗಳ ಪ್ರಮುಖ ದಿನಗಳು

ಎಪ್ರಿಲ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ/ವೈಶಾಖ ಮಾಸ

05 ಬು - ಶ್ರೀ ರಾಮ ನವಮಿ
09 ಭಾ - ಮಹಾವೀರ ಜಯಂತಿ
10/11 - ಹುಣ್ಣಿಮೆ,
14 ಶು - ಗುಡ್ ಫ್ರೈಡೆ / ಸಂಕಷ್ಟ ಚತುರ್ಥಿ
15 ಶ - ಹೋಲಿ ಸಾಟರ್ಡೇ, 16 ಭಾ - ಈಸ್ಟರ್ ಸಂಡೇ
22 ಶ - ಏಕಾದಶಿ, 26 ಬು - ಅಮಾವಾಸ್ಯೆ
27 ಗು - ವೈಶಾಖ ಮಾಸ ಆರಂಭ
29 ಶ - ಅಕ್ಷಯ ತದಿಗೆ/ಬವವ ಜಯಂತಿ
30 ಭಾ - ಶ್ರೀ ಶಂಕರಾಚಾರ್ಯ ಜಯಂತಿ

ಮೇ ಶ್ರೀ ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ/ಜ್ಯೇಷ್ಠ ಮಾಸ

01 ಸೋ - ರಾಮಾನುಜಾಚಾರ್ಯ ಜಯಂತಿ
06 ಶ - ಏಕಾದಶಿ
09 ಮಂ - ನೃಸಿಂಹ ಜಯಂತಿ
10 ಬು -ಪುದ್ಧ ಪೌರ್ಣಿಮೆ
12 ಶು - ಷಬ್-ಎ-ಬರಾತ್/ನಾರದ ಜಯಂತಿ
14 ಭಾ - ಸಂಕಷ್ಟ ಚತುರ್ಥಿ, 22 ಸೋ - ಏಕಾದಶಿ
25 ಗು - ಅಮಾವಾಸ್ಯೆ
26 ಶು - ಜ್ಯೇಷ್ಠ ಮಾಸ ಆರಂಭ
31 ಬು - ವಿಶ್ವ ತಂಬಾಕು ನಿಷೇಧ ದಿನ

ಈ ಹಾಡು ನಮ್ಮ ಸಿಡ್ನಿ ಸಮುದಾಯಕ್ಕೆ ಬಹಳ ಸೂಕ್ತವಾಗುತ್ತದೆ. ಸಿಡ್ನಿ ಕನ್ನಡ ಶಾಲೆ ಮತ್ತು ಸುಗಮ ಕನ್ನಡ ಕೂಟ ಪ್ರಾಯೋಜಕ ಯುಗಾದಿ ವಿಶೇಷ ಕಾರ್ಯಕ್ರಮ ಇದೇ ಏಪ್ರಿಲ್ ೨೨ಕ್ಕೆ ವಾಟ್ಟಲ್ ಗ್ರೋವ್ ಶಾಲೆ ಆವರಣದಲ್ಲಿ ಹಮ್ಮಿಕೊಂಡಿತು. ಕಾರ್ಯಕ್ರಮದ ಆವರಣ, ವೇದಿಕೆ ಮತ್ತು ಸೌಂಡ್ ಸಿಸ್ಟಮ್, ದೇವರ ಪಟ ದೀಪ ಇವೆಲ್ಲಗಳಿಂದ ಸಜ್ಜಾಗಿ ಕಾಯುತಿತ್ತು. ಸಿಡ್ನಿಯಲ್ಲಿ ಶರದ್ ಕಾಲ, ತಂಪಾದ ಗಾಳಿ ಬೀಸುವಾಗಲೇ, ಕನ್ನಡ ಶಾಲೆಯ ಪೋಷಕರು, ಅವರ ಗೆಳೆಯರು, ಅಜ್ಜ ಅಜ್ಜಿಯರು ಒಟ್ಟಾಗಿ ಆರುಗಂಟೆಗೆಲ್ಲಾ ಹಾಜರಾದರು. ಐದು ಹತ್ತು ನಿಮಿಷ ತಡವಾಗಿ ಬಂದ ಸಭಿಕರು, ಶುರು ಆಗೇ ಬಿಟ್ಟಿದೆ ಎಂದು ತುರ್ತಾಗಿ ಒಳಬಂದು, ಆಸೀನಾದರು.

ಕಾರ್ಯಕ್ರಮ ನಿಗದಿತ ವೇಳೆಗೆ ಶ್ರೀಯುತ ನಾರಾಯಣರವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ನಂತರ ಬಂದ ಅದಿತಿ ಪದುಮನಾಭ ಇಂಪಾಗಿ ಹಾಡಿದಳು. ಜಲಲ ಜಲಧಾರೆ ಕ್ಯಾರಿಯೋಕೆಗೆ ಪುಟ್ಟ ಸಮನ ದನಿಗೂಡಿಸಿದಳು. ಕ್ಯಾರಿಯೋಕಿ ಸಂಗೀತಕ್ಕೆ ಹಾಡೋದು ದೊಡ್ಡವರಾದ ನಮಗೆ ಕಷ್ಟ, ನಿರಂತರ ಅಭ್ಯಾಸ ಬೇಕು. ಪುಟ್ಟ ಚಿನ್ಮಯೀ ಬೆಳಗಾಗೆದ್ದು ಹಾಡನ್ನು ಲೀಲಾಜಾಲವಾಗಿ ಹಾಡಿ ಜನರ ಚಪ್ಪಾಳೆ ಗಳಿಸಿದ. ಹಾಡಿನ ಗುಂಗಲ್ಲಿದ್ದ ಸಭಿಕರಿಗೆ ಕೀಬೋರ್ಡ್ ವಾದನ ಶಾಲೆಯ ವಿದ್ಯಾರ್ಥಿಯಿಂದ ಮನ ರಂಜಿಸಿತು.

ತೂಂಗಾಬಿ ಶಾಲೆಯ ಮಕ್ಕಳಿಂದ ನೃತ್ಯ ಎಲ್ಲರ ಮನ ಗೆದ್ದಿತು. ಸುಂದರ ನೃತ್ಯ ಸಂಯೋಜನೆ ಮಾಡಿದ್ದು ಪೋಷಕರಾದ ಶ್ರೀಮತಿ ಶುಭಶ್ರೀ ರವಿ ಮತ್ತು ವಿದ್ಯಾ ಅರಸ್. ಮಕ್ಕಳು ಕಡೆಯಲ್ಲಿ ವೇದಿಕೆಯಿಂದ ಕೆಳಗಿಳಿದು ತಮ್ಮ ಪೋಷಕರ ಜೊತೆಗೂಡಿ ಹೆಜ್ಜೆ ಹಾಕಿದ್ದು ನೋಡಲು ಬಲು ಸೊಗಸಿತ್ತು. ನೃತ್ಯದ ಹಿಂದೆಯೇ ಪವಮಾನ ಸಮೂಹ ಭಕ್ತಿ ಗೀತೆ ಮಕ್ಕಳಿಂದ. ತದನಂತರ ಭಕ್ತಿ ಪೂರ್ವಕ ರಾಮ ನಾಮ ಪಾಯಸಕ್ಕೆ ಹಾಡಿದ್ದು - ಸಿಂಧು, ನಿರೀಕ್ಷ ಮತ್ತು ತಬಲ – ಪ್ರಣವ್.

ಒಂದಕ್ಕಿಂತ ಒಂದು ಚೆನ್ನಾದ ಕಾರ್ಯಕ್ರಮ ನೋಡುತ್ತಾ ಮಗ್ನರಾದ ಸಭಿಕರ ಮುಂದೆ ಶ್ರೀಮತಿ ಪೂರ್ಣಿಮಾ ನಾಗರಾಜ್ ರವರ ವೀಣಾವಾದನ, ಶ್ರೀಯುತ ಮಹೇಶ ಉರಾಲ ರವರ ಕೊಳಲು, ಭಾರತದಿಂದ ಬಂದ ಭಾರತಿಯವರ ಶಾಸ್ತ್ರೀಯ ಸಂಗೀತದ ಕಂಚಿನ ಕಂಠ, ಶ್ರೀಯುತ ನಾಗರಾಜ್ ರವರ ಮ್ಯಾಂಡೊಲಿನ್ ವಾದನ ಮಂತ್ರ ಮುಗ್ಧರನ್ನಾಗಿ ಮಾಡಿತು. ಶ್ರೀಯುತ ನಾಗಶೈಲಾ ಮ್ಯಾಂಡೊಲಿನ್ ವಾದನದ ಹಾಡಿನ ಬಗ್ಗೆ ಕೆಲವು ಪ್ರಶ್ನೆಗಳನ್ನೂ ಕೇಳಿದರು. ಕಾರ್ಯಕ್ರಮ ಸಂವಾದಕಾತ್ಮಕವಾಗಿತ್ತು.

ಕಡೆಯಲ್ಲಿ ಬಂದು ನಿಂತ ಸೂರಜ್ ಮತ್ತು ಅವನ ವಯೊಲಿನ್ ನೋಡಿ, ಇದೇನು ಶಾಸ್ತ್ರೀಯ ವಾದನ ನಿಂತು ನುಡಿಸುತ್ತಾನೆಯೇ ಎಂದು ಯೋಚಿಸುತ್ತಿರುವಾಗಲೇ, ಹಳೆಯ ಸಿನಿಮಾ ಹಾಡೊಂದು ಕಿವಿಗೆ ಕೇಳಿಸಿದಾಗ, ಅನಿರೀಕ್ಷಿತ ತಿರುವು ಕಾರ್ಯಕ್ರಮಕ್ಕೆ ಸಿಕ್ಕಿತು. ಮುಂಗಾರು ಮಳೆಯ "ಅನಿಸುತಿದೆ ಯಾಕೋ " ಹಾಡಿಗೆ ಸಿಕ್ಕಾಪಟ್ಟೆ ಶಿಳ್ಳೆ ಚಪ್ಪಾಳೆ ದೊರಕಿತು. ಅಣ್ಣಾವ್ರ " ಹುಟ್ಟಿದರೇ ಕನ್ನಡ ನಾಡಲ್ಲಿ " ಹಾಡು ನೆರೆದ ಎಲ್ಲರ ಮನದಲ್ಲಿ ದೇಶಭಕ್ತಿ ಎದ್ದು ನಿಂತಿತ್ತು.

ಕಾರ್ಯಕ್ರಮದ ನಿರೂಪಣೆ ಶ್ರೀಮತಿ ದೀಪ್ತಿ, ಶ್ರೀಮತಿ ಪ್ರತಿಭಾ ಮತ್ತು ಶ್ರೀಮತಿ ವೀಣಾ ಸುದರ್ಶನ್ ಸ್ವಚ್ಛ ಸುಂದರ ಕನ್ನಡ ಪದಗಳಿಂದ ಎಲ್ಲರ ಮನ ಸೆಳೆದರು. ಮತ್ತೊಂದು ಕ್ಯಾರಿಯೋಕಿ " ನಮ್ಮೂರ ಯುವರಾಣಿ ಹಾಡನ್ನು ಚಿರ ಪರಿಚಿತ ಶ್ರೀನಿವಾಸ್‌ರವರು ಬಹಳ ಅದ್ಭುತವಾಗಿ ಹಾಡಿದರು.

ಕಟ್ಟಕಡೆಯದಾಗಿ ಶ್ರೀಯುತ ಪ್ರವೀಣ್ ಇನ್ನೊಬ್ಬ ಪ್ರತಿಭಾವಂತ ಕಲಾವಿದ ಬೆಂಗಳೂರಿನಿಂದ ಬಂದಿದ್ದು ಸಿಡ್ನಿ ಕನ್ನಡಿಗರ ಅದೃಷ್ಟ. ಜಾನಪದ ಮತ್ತು ಭಾವಗೀತೆ ಹಾಡಿ, ಪ್ರೇಕ್ಷಕರನ್ನು ಬೇರೆಯದೇ ಲೋಕಕ್ಕೆ ಕರೆದೊಯ್ದರು. ಸಿ ಅಶ್ವಥ್ ರವರ ಶೈಲಿನಲ್ಲಿ ಹಾಡಿದ ಪ್ರವೀಣ್, ಅಶ್ವತ್ಥ್ ಹಾಡುಗಾರನನ್ನು ಮತ್ತೊಮ್ಮೆ ಜೀವಂತವಾಗಿಸಿದರು.

ಶಾಸ್ತ್ರೀಯ ಸಂಗೀತಾ, ತರ ತರದ ವಾದ್ಯಗಳು, ಕ್ಯಾರಿಯೋಕಿ. ಜಾನಪದ, ಭಕ್ತಿ, ಗೀತೆ ಮತ್ತು ಚಲನಚಿತ್ರ ಗೀತೆಗಳು ಎಲ್ಲಾ ಪ್ರಾಕಾರಗಳ ಹಾಡು ಕೇಳಿ ಮನಸ್ಸು ತುಂಬಿದ್ದರೂ, ಆವರಣದ ಹೊರಗೆ ಬಡಿಸುತಿದ್ದ ವಾಂಗೀಬಾತ್ ಮತ್ತು ಮೊಸರನ್ನ ಲಾಡು ಹೊಟ್ಟೆ ತಾಳ ಹಾಕುವಂತೆ ಮಾಡಿತು.

ಕಾರ್ಯಕ್ರಮದ ಯಶಸ್ವಿಗೆ ಕಾರಣರಾದ ಎಲ್ಲರಿಗೂ ಧನ್ಯವಾದ ಅರ್ಪಿಸಿ ನಾರಾಯಣ್ ರವರು ವಂದನಾರ್ಪಣೆಯೊಂದಿಗೆ ಯುಗಾದಿ ಸೊಬಗು ಮುಕ್ತಯವಾಯಿತು. ಕಾರ್ಯಕ್ರಮ ಮುಗಿದರೂ ಗೆಳೆಯ ಗೆಳತಿಯರೊಡನೆ ನಗು ಮಾತು ಹರಟೆ ಸಂತೋಷದ ವಾತಾವರಣ ಉಂಟು ಮಾಡಿತು. ▪



ಭರತ ಖಂಡದಲ್ಲಿ ಅವತರಿಸಿದ ಶ್ರೇಷ್ಠ ತತ್ವಜ್ಞಾನಿಗಳಾದ ಶ್ರೀ ಆದಿ ಶಂಕರಾಚಾರ್ಯರ ಜಯಂತಿಯನ್ನು ಸಿಡ್ನಿಯಲ್ಲಿ ಪ್ರಪ್ರಥಮ ಬಾರಿಗೆ ಆಯೋಜಿಸಲಾಗಿದೆ.

ದಿನಾಂಕ : ೧೩, ಮೇ ೨೦೧೭ ಬೆಳಿಗ್ಗೆ ೧೦ ಘಂಟೆಗೆ

ಸ್ಥಳ: ಮಿಂಟೋ ಶಿವ ಮಂದಿರ

ಆಸಕ್ತರು ಈ ಮಾಹಿತಿಯನ್ನು ಸ್ನೇಹಿತರ ಬಳಗಕ್ಕೆ ತಿಳಿಸಿ.

ಎಲ್ಲರೂ ಭಾಗವಹಿಸಬೇಕಾಗಿ ಕೋರಿಕೆ

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಕರ್ನಾಟಕ ವೈಭವ – ನೃತ್ಯ ರೂಪಕ

ನಾಗಶೈಲ ಕುಮಾರ್

ಏಪ್ರಿಲ್ 1ರಂದು ನಾರ್ತ್ ರಾಕ್ಸ್ ನ ಸಮುದಾಯಭವನದಲ್ಲಿ ಸಿಡ್ನಿ ಬಸವ ಸಮಿತಿಯವರು, ಬೆಂಗಳೂರಿನ 'ಶ್ರೀ ಶಿವಪ್ರಿಯ' ನೃತ್ಯವೃಂದ ಮತ್ತು ಸಿಡ್ನಿಯ 'ನಾಟ್ಯನಿವೇದನ' ಶಾಲೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ 'ಕರ್ನಾಟಕ ವೈಭವ' ಕಾರ್ಯಕ್ರಮಕ್ಕೆ ಜನರು ಕಿಕ್ಕಿರಿದು ನೆರೆದಿದ್ದರು. ಅಂದಿನ ಕಾರ್ಯಕ್ರಮದ ಕಿರುಪರಿಚಯ ಹಾಗೂ ವಚನದ ನಂತರ ಸ್ಥಳೀಯ ಪ್ರತಿಭಾವಂತ ಕಲಾವಿದರಾದ ಶ್ರೀ ರಾಮಕುಡ್ವರವರ ಗಾಯನದೊಂದಿಗೆ ಪ್ರಮುಖ ಕಾರ್ಯಕ್ರಮ ಆರಂಭವಾಗಿತ್ತು. ಯಾವ ಮೋಹನ ಮುರಳಿ ಕರೆಯಿತು, ಕೋಡಗನ ಕೋಳಿ ನುಂಗಿತ್ತಾ ಮತ್ತು ಉಳ್ಳವರು ಶಿವಾಲಯವ ಮಾಡುವರು, ಗೀತೆಗಳನ್ನು ಶ್ರೀ ಕುಡ್ವರವರು ತಮ್ಮ ತಂಡದವರೊಡನೆ ಸೊಗಸಾಗಿ ಪ್ರಸ್ತುತ ಪಡಿಸಿದರು. ನಂತರ ಕುಮಾರಿ ಅದಿತಿ ಮಲ್ಲಿಕಾರ್ಜುನ, "ಬಾಗಿಲೊಳು ಕೈ ಮುಗಿದು" ಗೀತೆಯ ಪದಗಳಿಗೆ ತಕ್ಕ ಹಾವಭಾವಗಳಿಂದ ನರ್ತಿಸಿ ರಂಜಿಸಿದಳು.

ಸಿಡ್ನಿಯ ನಾಟ್ಯನಿವೇದನ ಶಾಲೆಯ ಗುರು ಶ್ರೀಮತಿ ನಿಖಿಲಾ ಕಿರಣ್, ಮತ್ತು ಶ್ರೀ ಸತೀಶ್ ನಿರೂಪಕರಾಗಿ ಬಂದು, ತಮ್ಮ ಸೊಗಸಾದ ಮಾತುಗಳಿಂದ ಸಭಿಕರಿಗೆ ಕರ್ನಾಟಕದ ಇತಿಹಾಸವನ್ನು ಪರಿಚಯ ಮಾಡಿಸುತ್ತಾ ನೃತ್ಯ ರೂಪಕಕ್ಕೆ ನಾಂದಿ ಹಾಡಿದರು.

ಹೊಯ್ಸಳರ ಕಲಾಶ್ರೀಮಂತಿಕೆಯ ಬೇಲೂರು, ಮತ್ತು ನಾಟ್ಯರಾಣಿ ಶಾಂತಲೆಯ ಹಿರಿಮೆಯನ್ನು ಕೊಂಡಾಡುತ್ತಾ 'ಕರ್ನಾಟಕ ವೈಭವ' ಆರಂಭವಾಗಿತ್ತು. ನಾಟ್ಯರಾಣಿ ಎಂದಮೇಲೆ ನರ್ತನ ಕೇಳಬೇಕೆ? ಮೊದಲ ಸಮೂಹ ನೃತ್ಯವೇ ಜನರ ಮನವನ್ನು ಸೆಳೆದು ಸೆರೆ ಹಿಡಿದಿಡುವಲ್ಲಿ ಸಫಲವಾಗಿತ್ತು. ಶಿಲಾಬಾಲಿಕೆಯರ ಭಾವಭಂಗಿಗಳು ಜೀವಂತವಾಗಿ ರಂಗದ ಮೇಲೆ ಚಲಿಸುತ್ತಾ ಹೊಯ್ಸಳರ ಕಾಲಕ್ಕೆ ಕರೆದೊಯ್ದಿದ್ದವು. ನಂತರ ಆಚಾರ್ಯ ತ್ರಯರಾದ ಶಂಕರ ರಾಮಾನುಜ ಮತ್ತು ಮಧ್ವಾಚಾರ್ಯರುಗಳು ಮತ್ತು ಬಸವಣ್ಣನವರ ಪರಿಚಯವೂ ನಡೆಯಿತು. ನಮ್ಮವರೇ ಹಲವರು ಧಾರ್ಮಿಕ ಮಹಾಪುರುಷರ ವೇಷ ಧರಿಸಿ ಬಂದಾಗ ಜನರು ಮುದದಿಂದ ಚಪ್ಪಾಳೆ ತಟ್ಟಿದ್ದರು. ಮೇಲುಕೋಟೆಯ ಚೆಲುವನಾರಾಯಣನ ಬಗ್ಗೆ ಹೇಳಿ, ಸಿಡ್ನಿಯ ಸ್ತ್ರೀ ಸಮುದಾಯದಿಂದ 'ಚೆಲುವಯ್ಯ ಚೆಲುವೋ' ಜಾನಪದ ನೃತ್ಯ ನಡೆದಾಗ ಸಭಿಕರಿಂದ ಅಪಾರ ಮೆಚ್ಚುಗೆ ದೊರೆತಿತ್ತು.

ಮುಂದೆ ಕರ್ನಾಟಕಕ್ಕೆ ಸುವರ್ಣ ಯುಗವನ್ನು ನೀಡಿದ ವಿಜಯನಗರ ಸಾಮ್ರಾಜ್ಯಕ್ಕೆ ಪ್ರವೇಶ. ಕೃಷ್ಣದೇವರಾಯ ಅವನ ಪತ್ನಿಯರ ಶೃಂಗಾರ, ರಸಿಕತೆಗಳ ಅಮೋಘ ನೃತ್ಯ ಪ್ರದರ್ಶನವಾಯಿತು.

ವಿಜಯನಗರದ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದವರು ಮೈಸೂರಿನ ಅರಸರು. ದಸರಾ ನವರಾತ್ರಿಯ ಉತ್ಸವಗಳೂ ಕರ್ನಾಟಕದ ವೈಭವದ ನಾಡಹಬ್ಬವಾಗಿ ಬೆಳೆದು ಬಂತು. ಮಹಿಷಾಸುರ ಮರ್ಧಿನಿಯ ನೃತ್ಯವಂತೂ ಅಂದು ಎಲ್ಲಕ್ಕಿಂತ ಹೆಚ್ಚು ಮೆಚ್ಚುಗೆ ಗಳಿಸಿದ ನೃತ್ಯವೆಂದೇ ಹೇಳಬಹುದು. ಮಹೊಷಾಸುರನ ಪಾತ್ರದಲ್ಲಿ ನರ್ತಿಸಿದ ನರ್ತಕ ಗೋಪಾಲ್ ತೋರಿದ ಅತ್ಯದ್ಭುತ ನರ್ತನ, ಆ ನೃತ್ಯಕ್ಕೆ ಬೇಕಾಗಿದ್ದ ಅಪಾರ ಶಕ್ತಿ, ಜನರನ್ನು ಮೂಕ ವಿಸ್ಮಿತರನ್ನಾಗಿಸಿತ್ತು. ಮೈಸೂರು ಸಂಸ್ತಾನದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸರ್ ಎಂ ವಿಶ್ವೇಶ್ವರಯ್ಯನವರೊಡಗೂಡಿ ಕರ್ನಾಟಕದ ಏಳಿಗೆಗಾಗಿ ಮಾಡಿರುವ ಮಹತ್ಕಾರ್ಯಗಳ ನೋಟ, ನಮ್ಮ ಹಿರಿಯ ನಾಯಕರುಗಳ ಬಗ್ಗೆ ಹೆಮ್ಮೆ ಮೂಡಿಸಿತು.

ಮುಕ್ತಾಯಕ್ಕೆ ಮಾಡಿದ ಕರ್ನಾಟಕದ ನಾಡಗೀತೆ ' ಜಯಭಾರತ ಜನನಿಯ ತನುಜಾತೆ' ನೃತ್ಯಸಂಯೋಜನೆಯಂತೂ ಜನರನ್ನು ಹುಚ್ಚೆಬ್ಬಿಸಿತ್ತು. ಅದು ಮುಗಿದಾಗ ಅಷ್ಟಕ್ಕೇ ತೃಪ್ತರಾಗದ ಜನಸ್ತೋಮ ಮತ್ತೊಮ್ಮೆ ಅದನ್ನು ಪ್ರದರ್ಶಿಸುವಂತೆ ಹುಯಿಲೆಬ್ಬಿಸಿದ್ದರು. ಸಾಕಷ್ಟೇ ದಣಿದಿದ್ದರೂ ನೃತ್ಯ ತಂಡದವರು ಅಭಿಮಾನಿಗಳ ಪ್ರೀತಿಗೆ ತಲೆಬಾಗಿ ಮತ್ತೊಮ್ಮೆ ಅದನ್ನು ಪ್ರಸ್ತುತ ಪಡಿಸಿದರು. ವೇದಿಕೆಯ ಮೇಲೆ ಅಂದು ಭಾಗವಹಿಸಿದ್ದ ಪ್ರತಿಯೊಬ್ಬರನ್ನೂ ಕರೆದು ಪರಿಚಯಿಸಿ, ಗೌರವಿಸುವುದರೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು.

ಸಿನೆಮಾರಂಗದಲ್ಲಿ ಬಾಲಕಲಾವಿದನಾಗಿ ಹೆಸರು ಮಾಡಿದ್ದ, ನರ್ತಕ, ನಟ ಡಾ. ಸಂಜಯ್ ಶಾಂತಾರಾಮ್ ಅವರ 'ಶಿವಪ್ರಿಯ' ಶಿಷ್ಯವೃಂದದವರ ನೃತ್ಯಗಳು ಎರಡು ಗಂಟೆಗಳ ಕಾಲ ಅಲ್ಲಿ ನೆರೆದಿದ್ದ ಸಭಿಕರನ್ನು ಕಟ್ಟಿಹಾಕಿತ್ತು. ರಂಗಮಂಚದ ಮೇಲೆ ಮಿಂಚಿನಂತ ಸಂಚಾರ, ಅದ್ಭುತ ಭಾವಪ್ರದರ್ಶನ, ಗುಂಪಾಗಿ ನಾಟ್ಯವಾಡುವಾಗ ಅಲ್ಲಿ ಕಂಡುಬಂದ ಭಿನ್ನ ರೀತಿಯ ವಿನ್ಯಾಸಗಳು ಮತ್ತು ಅಷ್ಟೂ ಜನರ ಸಂಚಾರದ ಮೇಳೈಸುವಿಕೆಯಂತೂ ಅವಿಸ್ಮರಣೀಯ. ಎಲ್ಲವೂ ಮುಗಿದ ಮೇಲೆ ನೆರೆದಿದ್ದ ಜನತೆ ಎದ್ದು ನಿಂತು ದೀರ್ಘಕಾಲದ ಚಪ್ಪಾಳೆಯ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇಷ್ಟೇನೇ, ಮುಗಿದು ಹೋಯಿತೇ, ಇನ್ನೂ ಇದ್ದಿದ್ದರೂ ಚೆನ್ನಾಗಿರುತ್ತಿತ್ತು ಎನ್ನಿಸಿತು ಎದ್ದು ಬರುವಾಗ. ▪

ಸಿಡ್ನಿಯಲ್ಲಿ ಜರುಗಿದ

ಕರ್ನಾಟಕ ವೈಭವ ನೃತ್ಯ ರೂಪಕದ

ಛಾಯ ಚಿತ್ರಗಳು

ಚಿತ್ರ ಕೃಪೆ: ಶ್ರೀ ನಾಗಭೂಷಣ್



ಕ್ರಮವೊಂದು ಲಕ್ಷ್ಯವೊಂದುಂಟೇನು ಸೃಷ್ಟಿಯಲಿ?
ಭ್ರಮಿಪುದೇನಾಗಾಗ ಕರ್ತೃವಿನ ಮನಸು?
ಮಮತೆಯುಳ್ಳವನಾತನಾದೊಡೀ ಜೀವಗಳು
ಶ್ರಮಪಡುವುದೇಕಿಂತು ?-ಮಂಕುತಿಮ್ಮ ||

ಮಮತೆಯುಳ್ಳವನಾತನಾದೊಡೀ=ಮಮತೆ+ಉಳ್ಳವನ್+ಆತನ+ಆದೊಡೆ+ಈ
ಕರ್ತೃ=ಜಗತ್ತನ್ನು ಸೃಷ್ಟಿದವ , ಆದೊಡೆ=ಆದರೆ, ಶ್ರಮ=ಕಷ್ಟ, ಕ್ರಮವು=ರೀತಿ, ಲಕ್ಷ್ಯವು=ಗುರಿ,
ಭ್ರಮಿಪುದು=ವಿಕಾರಗೊಳ್ಳುವುದು ಅಥವಾ ವಿಚಲಿತವಾಗುವುದು.

ಇಲ್ಲಿ ಗುಂಡಪ್ಪನವರು ಕೇಳುವ ಪ್ರಶ್ನೆ ಹೀಗಿದೆ "ಈ ಭಗವಂತನ ಸೃಷ್ಟಿಯಲ್ಲಿ ಒಂದು ಕ್ರಮ ಅಥವಾ ಗುರಿ ಏನಾದರೂ ಇದೆಯೇ? ಈ ಸೃಷ್ಟಿಕರ್ತನ ಮನಸ್ಸು ಏಕೆ ಆಗಾಗ ವಿಚಲಿತವಾಗಿ ಎಲ್ಲೆಲ್ಲೋ ಹರಿದಾಡುತ್ತದೆ. ತಾನು ಸೃಷ್ಟಿಸಿದ ಜೀವಿಗಳ ಮೇಲೆ ಅವನಿಗೆ ಪ್ರೀತಿ ವಾತ್ಸಲ್ಯಗಳು ಇರುವುದಾದರೆ ಈ ಜೀವಿಗಳು ಏತಕ್ಕಾಗಿ ಈ ರೀತಿಯ ಕಷ್ಟಗಳನ್ನು ಅನುಭವಿಸುತ್ತವೆ? ಗುಂಡಪ್ಪನವರ ಮನಕರಗಿ ಇಂತಹ ಪ್ರಶ್ನೆಗಳನ್ನು ತಮ್ಮನ್ನು ತಾವೇ ಕೇಳಿಕೊಳ್ಳುತ್ತಾ, ಓದುಗರ ಮುಂದಿಡುತ್ತಾರೆ.

ಇಡೀ ಜಗತ್ತಿನ ಆಗು ಹೋಗುಗಳಿಗೆ ಏನಾದರೂ ಒಂದು ಕ್ರಮವಿದೆಯೇ ಎಂದು ಅವರ ಪ್ರಶ್ನೆ. ಇದೆ ಎಂದು ಹೇಳಬಹುದು. ಹಗಲು ರಾತ್ರಿಗಳು ಭೂಮಿಯ ಸುತ್ತುವಿಕೆಯಿಂದ ಆಗುತ್ತದೆ. ಭೂಮಿಯೂ ಒಂದು ಲೆಕ್ಕಾಚಾರದಲ್ಲೇ ಸುತ್ತುತ್ತದೆ. ಹಾಗೆ ಸುತ್ತುವುದರಿಂದ ಋತುಮಾನಗಳು. ಬಿಸಿಲು, ಮಳೆ, ಚಳಿ ಮತ್ತು ಗಾಳಿ ಕಾಲಗಳು. ಬೆಳೆಗಳು, ಹೂ, ಹಣ್ಣುಗಳಿಗೂ ಒಂದೊಂದು ಕಾಲ.

ಆದರೂ ಆಗಾಗ ನಮಗರಿಯದಂತ ವ್ಯತ್ಯಾಸಗಳು ಆಗುತ್ತವೆ. ಅತೀವೃಷ್ಟಿ-ಅನಾವೃಷ್ಟಿಗಳು, ಜ್ವಾಲಾಮುಖಿಗಳು, ಭೂಕಂಪಗಳು, ಯುದ್ಧಗಳು, ಹೀಗೆ ಮಾನವನಿಗೆ ಮತ್ತು ಜೀವಿಗಳಿಗೆ ಮಾರಕವಾದ ನೈಸರ್ಗಿಕ ವಿದ್ಯಮಾನಗಳು ನಡೆಯುವಾಗ, ಏಕೆ ಈ ಭಗವಂತನ ಸೃಷ್ಟಿಯಲಿ ಒಂದು ಕ್ರಮವೇ ಇಲ್ಲವೇ ಮತ್ತು ಇದನ್ನೆಲ್ಲಾ ಆಗಗೊಡುವ ಆ ಪರಮಾತ್ಮನ ಮನಸ್ಸು ಏಕೆ ವಿಚಲಿತಗೊಳ್ಳುತ್ತದೆ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಅಂತಹ ಪ್ರಶ್ನೆಯನ್ನೇ ಡಿ.ವಿ.ಜಿ.ಯವರು ಕೇಳುತ್ತಾರೆ.

ಈ ಜಗತ್ತಿನಲ್ಲಿ ನಡೆಯುವ ಜೀವನದ ನಾಟಕದಲ್ಲಿ ಒಬ್ಬೊಬ್ಬರು ಒಂದು ರೀತಿ. ಒಬ್ಬರಂತೆ ಒಬ್ಬರಿಲ್ಲ, ಒಬ್ಬರ ಯೋಚನೆಯಂತೆ ಮತ್ತೊಬ್ಬರದಿಲ್ಲ, ಪ್ರತಿಯೊಬ್ಬರ ಆಸೆ ಆಕಾಂಕ್ಷೆಗಳೂ ಭಿನ್ನ ಭಿನ್ನ ಅಲ್ಲವೇ? ಅವನ ಬುದ್ಧಿ ಏಕೆ ಹಾಗೆ ಭಿನ್ನ ಭಿನ್ನ ಎನ್ನುವುದಕ್ಕೆ ವಿಜ್ಞಾನಿಗಳು, ಶಾಸ್ತ್ರಜ್ಞರೂ, ತತ್ವವೇತ್ತರೂ ಸಹ ಭಿನ್ನ ಭಿನ್ನವಾದ ವ್ಯಾಖ್ಯಾನ ಮಾಡುತ್ತಾರೆ. ಹಾಗಾಗಿ ಭಿನ್ನತೆಯೇ ಜೀವನದ ಲಕ್ಷಣ ಅಥವಾ ಗುಣ.

ಈ ಭಿನ್ನತೆಗೂ ಆ ಪರಮಾತ್ಮನೇ ಕಾರಣನೇ? ಎಂದರೆ. ಅಹುದು ಮತ್ತು ಅಲ್ಲ. ಇಲ್ಲಿ ಎರಡು ವಿಚಾರಗಳಿವೆ. ಒಂದು "ಎಲ್ಲವೂ ಪರಮಾತ್ಮನ ಇಚ್ಛೆಯಂತೆ ನಡೆಯುತ್ತದೆ" ಎಂದರೆ ಈ ಭಿನ್ನತೆಯೂ ಅವನ ಇಚ್ಛೆಯಂತೆಯೆ ಎಂದು ಆಯಿತು. "ಪ್ರತಿ ಜೀವಿಯೂ ಅವನವನ ಕರ್ಮಕ್ಕನುಗುಣವಾಗಿ ಫಲಾಫಲಗಳನ್ನು ಪಡೆದು ಜೀವಿಸುತ್ತಾನೆ" ಎಂದಾದರೆ ಇಲ್ಲಿ, ಪರಮಾತ್ಮನ ಪ್ರಮೇಯ ಕಡಿಮೆ. ಆದರೆ "ಇದೋ" ಅಥವಾ "ಅದೋ" ಎನ್ನುವ ದ್ವಂದ್ವ ಸಹ ಸದಾ ಮಹಾ ಮಹಾ ಪಂಡಿತರನ್ನೇ ಕಾಡಿದೆ ಮತ್ತು ಇಂದಿಗೂ ಇತ್ಯರ್ಥವಾಗದೆ ಉಳಿದಿದೆ.

ಈ ಮುಕ್ತಕಕ್ಕೆ ಮತ್ತು ಈ ಮುಕ್ತಕದ ಹಿಂದಿನ ನಾಲ್ಕು ಮುಕ್ತಕಗಳಿಗೂ ಮತ್ತು ಮುಂದೆ ಬರುವ ಮುಕ್ತಕಗಳಿಗೂ ಒಂದು ಹಿನ್ನೆಲೆಯುಂಟು. ಗುಂಡಪ್ಪನವರು ಈ ಕಗ್ಗವನ್ನು ಮೊದಲು ಪ್ರಕಟಿಸಿದ್ದು 1943ರಲ್ಲಿ. ಆಗ ಜಗತ್ತಿನೆಲ್ಲೆಲ್ಲೂ ಬರ, ಅನಾವೃಷ್ಟಿ. 2ನೇ ವಿಶ್ವ ಯುದ್ಧದ ಕಾಲ. ಎಲ್ಲೆಲ್ಲೂ ಹಾಹಾಕಾರ, ಆಕ್ರಂದನ, ಬಡತನ, ಆಹಾರದ ಕೊರತೆ,ರೋಗ-ರುಜಿನಗಳ ಮಹಾಪೂರ, ಹೀಗೆ ಹತ್ತು ಹಲವಾರು ಪ್ರಕೋಪಗಳಿಗೆ ಬಲಿಯಾಗಿ ಜನರು ತೊಳಲಾಡುತ್ತಿದ್ದರು. ಹಾಗಾಗಿ ಡಿ.ವಿ.ಜಿ.ಯವರು ಅಂದಿನ ಪರಿಸ್ಥಿತಿಗೆ ಪ್ರತಿಕ್ರಿಯೆಯ ರೂಪದಲ್ಲಿ, "ಆ ಪರಮಾತ್ಮನು ಎಲ್ಲರನ್ನೂ ಸೃಷ್ಟಿಸಿ, ಎಲ್ಲರಲ್ಲೂ ಸಮಾನವಾದ ಪ್ರೀತಿ ಇದ್ದರೆ ಈ ರೀತಿಯ ಸಂಕಷ್ಟಗಳು ಜನರಿಗೆ ಏಕೆ?" ಎಂಬಂತಹ ಕರುಣಾ ಪೂರಿತವಾದ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುತ್ತಾರೆ.

ಆದರೆ ವಾಚಕರೇ, ಅಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಏನೂ ವ್ಯತ್ಯಾಸವಿಲ್ಲ. ಪ್ರಪಂಚದಲ್ಲಿ ಮಾನವನ ಜೀವನ ಇನ್ನಷ್ಟು ಕ್ಲಿಷ್ಟವಾಗಿದೆ, ಇನ್ನಷ್ಟು ಹದಗೆಟ್ಟಿದೆ, ಸ್ವಾರ್ಥದ ಬುದ್ಧಿ ಇನ್ನಷ್ಟು ಬಲವಾಗಿದೆ, ದೇಶ-ದೇಶಗಳ ನಡುವೆ ದ್ವೇಷದ ಭಾವ ಇನ್ನೂ ಹಾಗೆ ಇದೆ. ಹಳೆಯದನ್ನು ಮರೆತು, ಪ್ರೀತಿ ವಿಶ್ವಾಸದಲಿ, ತೃಪ್ತಿ ಸಂತೋಷದಲಿ, ಬದುಕಿ ಪ್ರಗತಿಯತ್ತ ಹೋಗಲು ಯಾರಿಗೂ ಇಷ್ಟವಿಲ್ಲ. ಹಾಗಾಗಿ ಮಾನ್ಯ ಗುಂಡಪ್ಪನವರು ಅಂದು ಕೇಳಿದ ಪ್ರಶ್ನೆಗಳು ಇಂದಿಗೂ ಪ್ರಸ್ತುತ. ಅವರ ವಿಚಾರಗಳನ್ನು ನಮ್ಮ ಮನಸ್ಸುಗಳಲ್ಲೂ ವಿಚಾರದ ಒರೆಗೆ ಹಚ್ಚಿ ನೋಡೋಣ ಬನ್ನಿ ಮಿತ್ರರೇ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸೀನುವಿನ ಯುಗಾದಿ ಶಾಪಿಂಗ್

"ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ" ಎಂದು ಗುನುಗುತ್ತಿದ್ದೆ.

"ನಿಜ ಕಣಯ್ಯ. ಈ ವರ್ಷವಂತೂ ಮರಳಿ ಮರಳಿ ಬರುತಿದೆ. ಎಲ್ಲ ವರ್ಷಗಳಿಗಿಂತ ಈ ವರ್ಷ ಬಿಸಿಲು ಹೆಚ್ಚಿ, ಕೆರೆಯ ನೀರಿಗೆ ಕೋಲ್ಡ್ ಬಿಸ್ಲೇರಿ ವಾಟರ್ ಸೇರಿಸದಿದ್ದರೆ ಕೆರೆಯಲ್ಲಿರುವ ಮೀನುಗಳೆಲ್ಲ ಬಾಯಿಲ್ಡ್ ಫಿಷ್ ಆಗಿಬಿಡುತ್ತವೆ. ಬಿಸಿ ತಡೆಯಲಾಗದೆ ದಡಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಮೀನುಗಳು ಫಿಷ್ ಫ್ರೈ ಆಗಿಬಿಡುತ್ತವೆ. ಅಬ್ಬಬ್ಬ ಏನು ಬಿಸಿಲು" ಎಂದ ಸೀನು ಒಳಬರುತ್ತಾ.

"ಛಿ! ವರ್ಷಾವಧಿ ಹಬ್ಬದ ದಿನ ಮೀನು ಅನ್ನುವ ನಿನ್ನದು ಮೀನ್ ಮೆಂಟಾಲಿಟಿ" ಗದರಿಕೊಂಡೆ

"ಬಾಡೂಟಕ್ಕೆ ಅದೇ ಸರಿಯಾದ ಮೆಂಟಾಲಿಟಿ. ಬಿಡು. ಹಬ್ಬಕ್ಕೆ ಏನೇನು ಮಾಡಿದೆ?" ಎಂದ ಸೋಲೊಪ್ಪದ ಸೀನು.

"ಹಣ್ಣಿಗಾಗಿ ಸಂಬಳ ಖರ್ಚು ಮಾಡಿದೆ. ಹೂವಿಗಾಗಿ ಬ್ಯಾಂಕ್ ಲೋನ್ ತೆಗೆದುಕೊಂಡೆ. ಒಬ್ಬಟ್ಟನ್ನು ಇಂಸ್ಟಾಲ್‌ಮೆಂಟ್‌ನಲ್ಲಿ ಖರೀದಿಸಿದೆ. ನೀನು?"

ಸೀನುವಿನದು, ಅವನೇ ಹೇಳುವಂತೆ, ತುಂಬುಕುಟುಂಬ. ಅವರ ಮನೆಯಲ್ಲಿರುವವರೆಲ್ಲ ಚೆನ್ನಾಗಿ ಮೈಕೈ ತುಂಬಿಕೊಂಡಿದ್ದಾರೆ! ಸೀನಿಂಗಿಯಂತೂ ನಗರದಲ್ಲಿ ಯಾವುದಾದರೂ ಸರ್ಕಲ್ ರಿಪೇರಿಗಾಗಿ ಒಡೆಯಬೇಕಾದ ಸಂದರ್ಭ ಬಂದರೆ ತಾತ್ಕಾಲಿಕ ಸರ್ಕಲ್ ಆಗಿ ಬಳಸಲು ಯೋಗ್ಯವಾದ ವೃತ್ತಾಕಾರವನ್ನು ಹೊಂದಿದ್ದಾಳೆ. ಸೀನುವಿನ ತಮ್ಮ ಮಾತ್ರ ಸಣ್ಣವೋ ಸಣ್ಣ. "ತುಂಬುಕುಟುಂಬ" ಎನ್ನುವುದಕ್ಕೆ ತುಂಬಿಕೊಂಡಿರದ ಇವನು ಅಪವಾದ ಎನ್ನುವಿರೆ? ಉಹೂಂ. ಮೈಯಲ್ಲಿಲ್ಲದ ಕೊಬ್ಬು ಮನದಲ್ಲಿ ಧಾರಾಳವಾಗಿ ತುಂಬಿಕೊಂಡಿದೆ.

"ನೋಡು. ಮನೆಯವರಿಗೆ ತಂದದ್ದನ್ನು ತೋರಿಸಿಹೋಗೋಣ ಅಂತಾನೇ ಬಂದೆ" ಎನ್ನುತ್ತಾ ಸೀನು ಒಂದೊಂದಾಗಿ ಐಟಮ್ಸ್ ಹೊರತೆಗೆಯಲಾರಂಭಿಸಿದ.

ಮೊದಲಿಗೆ ಗರಿಗರಿಯಾದ ಕಂಬಿಯಂಚಿನ ಪಂಚೆ ಹೊರಬಂತು.

"ನಿಮ್ಮಪ್ಪ ಲುಂಗಿ ಉಡೋದಲ್ವೇನೋ...?"

"ಉಡುತ್ತಿದ್ರು... ಈಗ ಅದು ಅಮ್ಮನ ನೋಟನಿಷೇಧಕ್ಕೆ ಒಳಗಾಗಿದೆ"

"ಯಾಕೆ?"

"ಪಕ್ಕದ ಮನೆಗೆ ವೇಲಾಯುಧನ್ ಗುಡುಂಬಂ ಬಂದರಲ್ಲಾ, ಅವರ ನಾದಿನಿ ಸೆಲುವರಸಿಯನ್ನು ಕಂಡಾಗಿನಿಂದ, ಲುಂಗಿಯ ಚುಂಗನ್ನು ಅತ್ತ ಇತ್ತ ತಿರುಗಿಸುತ್ತಾ 'ಲುಂಗಿ ಡಾನ್ಸು ಲುಂಗಿ ಡಾನ್ಸು ಲುಂಗಿ ಡಾನ್ಸು ಲುಂಗಿ ಡಾನ್ಸ್' ಅನ್ನಕ್ಕೆ ಶುರು ಮಾಡಿದರು. ಅಮ್ಮನ ಹೈಕಮಾಂಡ್ ಬುದ್ಧಿ ಜಾಗೃತವಾಗಿ, ಪಕ್ಷಾಂತರ ನಿಷೇಧ ಕಾನೂನಿನಡಿ ಲುಂಗಿ ಬ್ಯಾನ್ ಮಾಡಿ ಪಂಚೆ, ಶಲ್ಯ ತೊಡಬೇಕು ಅಂತ ಆರ್ಡರ್ ಪಾಸ್ ಮಾಡಿದರು"

"ನಿಮ್ಮಪ್ಪ ಸುಮ್ಮನಿದ್ರಾ?"

"ಟ್ವೆಂಟಿ ಇಯರ್ಸ್ ಆಫ್ ಒಬೀಡಿಯನ್ಸ್ ತಕ್ಷಣಕ್ಕೆ ಹೋಗತ್ತಾ...? ಲುಂಗಿಯನ್ನೇನೋ ಬಿಟ್ಟರು. ಆದರೆ ಬರ್ಮುಡಾ ತೊಡಲು ಆರಂಭಿಸಿದರು"

"ಮತ್ತೆ ನಿಮ್ಮಮ್ಮ ಸಿಡಿದರೇನು?"

"ಇಲ್ಲ. ಸೆಲುವರಿಸಿಯೇ ಹೇಳಿದಳಂತೆ"

"ಏನಂತ?"

"ನೀಂಗಳ್ ಪಂಜೆ ಹುಟ್ಟಿಕೊಂಡಾ ನಂಬ ತಲೈವಾರ್ ಕರುಣಾನಿಧಿ ಮಾದರಿ ಇರ್ತೀರ. ನನಕು ಅವರು ರೊಂಬ ಇಷ್ಟ' ಎಂದಳಂತೆ. ಅವತ್ತೇ ಅಪ್ಪ ಕೂತು ಪಂಚೆಯ ಪರವಾಗಿ, ಬರ್ಮುಡಾಗಳ ವಿರುದ್ಧವಾಗಿ ಕವನ ಗೀಚೇಬಿಟ್ರು. ತೊಗೊ ಆ ಕವನ"

ಉಟ್ಟರೆ ಧೋತಿಯಾದೆ ಕಟ್ಟಿದರೆ ತೊಟ್ಟಿಲಾದೆ
ತೊಟ್ಟು ಹಳತಾಗುತಲೆ ಕೈವಸ್ತ್ರವಾದೆ
ಸುತ್ತಿ ತಲೆಗೇರ್ಸಿದರೆ ಮುಂಡಾಸು ಆದೆ
ನೀನಾರಿಗಾದೆಯೋ ಎಲೆ ಬರ್ಮುಡಾ ಗರಿಗರಿ ಪಂಚೆ ನಾನು
ಹಾಸೆ ಹಾಸಿಗೆಯಾದೆ ಹೊದಿಯೆ ಹೊದ್ದಿಕೆಯಾದೆ
ಸಂಡಿಗೆ ಹರವಲು ನಾ ವಸ್ತುವಾದೆ
ಹರಿಯೆ ನೆಲವೊರೆಸೋ ಕೆಲಸಕ್ಕೂ ನಾನಾದೆ
ನೀನಾರಿಗಾದೆಯೋ ಎಲೆ ಬರ್ಮುಡಾ ಗರಿಗರಿ ಪಂಚೆ ನಾನು

ಎಂದು ಬರೆದಿದ್ದರು ಅಪ್ಪ!

ಮುಂದಿನ ಪುಟ ನೋಡಿ ...

“ಗುಡ್. ಅಮ್ಮನಿಗೆ ಏನು ತಂದೆ?”

“ನೋಡಿಲ್ಲಿದೆ”

ಅತ್ಯಾಧುನಿಕ ಮೇಕಪ್ ಸೆಟ್!!!

“ಈ ವಯಸ್ಸಿನಲ್ಲೀ....?” ಹೌಹಾರಿದೆ.

“ಸ್ಪರ್ಧಾಪ್ರಪಂಚ ಗುರುವೇ. ಕಾಂಪಿಟೇಷನ್ ಸ್ಟ್ರಾಂಗ್ ಇದ್ದಾಗ ಕ್ಯಾಂಡಿಡೇಟ್ ವೀಕ್ ಆಗ್ಬಾರ್ದು. ಸೆಲುವರಸಿಯನ್ನು ಮೀರಿಸುವ ಹಂತಕ್ಕೆ ಮೇಕಪ್ ಮಾಡಿಕೊಳ್ಳಲು ಅಮ್ಮ ಸಜ್ಜಾಗಿದ್ದಾರೆ. ಬಳಸುತ್ತಿದ್ದ ಮೈಸೂರ್ ಸ್ಯಾಂಡಲ್ ಬದಲಿಗೆ ಸಂತೂರ್ ಸೋಪ್ ಬಳಸಲು ಆರಂಭಿಸಿದ್ದಾರೆ. ಜಾಗಿಂಗ್ ಆರಂಭಿಸಿದ್ದಾರೆ”

“ಜಾಗಿಂಗೇ? ಎನಿ ಎಫೆಕ್ಟ್?”

“ಹೂಂ. ಮನೆಯ ಮುಂದಿದ್ದ ರೋಡ್ ಹಂಪ್, ಇವರು ಅಲ್ಲಿ ಸ್ಪಾಟ್ ಜಾಗಿಂಗ್ ಮಾಡಿದುದರ ಪರಿಣಾಮವಾಗಿ, ಲೆವೆಲ್ ಆಗಿದೆ”

“ನಿಮ್ಮಪ್ಪನ ಮೇಲೆ ಏನಾದರೂ ಎಫೆಕ್ಟ್ ಆಯಿತೇನೋ?”

“ಹೂಂ. ಕೆನ್ನೆ ಉದಿದೆ. ಟ್ರ್ಯಾಕ್ ಪ್ಯಾಂಟ್‌ನಲ್ಲಿದ್ದ ಅಮ್ಮನನ್ನು ಗುರುತಿಸದೆ ವಿಷಲ್ ಹೊಡೆದರಂತೆ”

“ನಿಮ್ಮಮ್ಮ ಖುಷಿಯಾಗಬೇಕಿತ್ತಲ್ವಾ?”

“ಒಳಗೊಳಗೆ ಖುಷಿ ಆಯ್ತಂತೆ. ಆದರೆ ಇವರು ಎಲ್ಲ ಹುಡುಗಿಯರಿಗೂ ವಿಷಲ್ ಹೊಡೆಯದಿರಲಿ ಅಂತ ಮುನ್ನೆಚ್ಚರಿಕೆ ಕ್ರಮವಾಗಿ ಕೆನ್ನೆ ಉದಿಸಿದರಂತೆ”

“ಸರಿಯಾದ ಜೋಡಿ. ಆದರ್ಶ ದಂಪತಿಗಳು ಕಾರ್ಯಕ್ರಮಕ್ಕೆ ಕಳಿಸಬೇಕಾಗಿತ್ತು ಸೀನು”

“ಕಳಿಸಿದ್ದೆ”

“ಏನಾಯ್ತು?”

“ಅಮ್ಮ ಮೂಕಾಭಿನಯದಿಂದ ತೋರಿಸಿದ್ದೆಲ್ಲವನ್ನೂ ಅಪ್ಪ ಸರಿಯಾಗಿ ಗೆಸ್ ಮಾಡಿದರಂತೆ”

“ವಾವ್. ಸೂಪರ್!”

“ಸೂಪರ್ರೂ ಇಲ್ಲ, ಮಣ್ಣೂ ಇಲ್ಲ. ಡೈಲಿ ಎಕ್ಸ್‌ಪೀರಿಯೆನ್ಸ್ ಅಷ್ಟೆ. ಆದರೆ ಅಪ್ಪನ ಯಾವ ಮೂಕಾಭಿನಯವೂ ಅಮ್ಮನಿಗೆ ತಿಳಿಯಲಿಲ್ಲವಂತೆ.”

“ಏಕೆ?”

“ಅಪ್ಪ ಅಮ್ಮನ ಮುಂದೆ ತಗ್ಗಿಸಿದ ತಲೆ ಎತ್ತಿದ್ದರಲ್ಲವೇ ಎಕ್ಸ್‌ಪ್ರೆಷನ್ ತಿಳಿಯಲು! ಅಪ್ಪನ ಎಕ್ಸ್‌ಪ್ರೆಷನ್ ತಿಳಿಯಬೇಕಾದರೆ ಎದುರು ಮನೆಯ ಆಂಟಿಯನ್ನು ಕೇಳಬೇಕಾಗಿತ್ತು”

“ಅದೇಕೆ?”

“ಅಮ್ಮನ ಬಗ್ಗೆ ದೂರನ್ನು ಕಿಟಕಿಯಿಂದ ಸನ್ನೆಯ ಮೂಲಕ ರವಾನೆ ಮಾಡುತ್ತಿದ್ದರಂತೆ ಅಪ್ಪ.”

“ಒಳ್ಳೆ ಟ್ರಯಾಂಗಲ್ ಸ್ಟೋರಿ ಅನ್ನು”

“ಛೆ! ಹಾಗೇನಿಲ್ಲ. ಆ ಆಂಟಿಗೆ ಅಪ್ಪನ ಮೇಲೆ ಇದ್ದದ್ದು ಪ್ರಾಣಿದಯಾಸಂಘದವರಿಗೆ ಪ್ರಾಣಿಗಳ ಮೇಲೆ ಇರುವಂತಹ ಅನುಕಂಪ ಅಷ್ಟೆ ಅಂತೆ”

“ಓಕೆ. ಆದರ್ಶ ದಂಪತಿಗಳ ಬಗ್ಗೆ ಹೇಳ್ತಿದ್ದೇ....”

“ಹಾಂ. ಡಂಬ್ ಷರಾಡ್ ಮಾಡ್ತಾರಲ್ಲ, ಅಲ್ಲಿ ‘ನೀವು... ನಿಮ್ಮ ಮನೆಯವರನ್ನ... ನೋಡಕ್ಕೆ ಹೋದಾಗ... ಅವರು... ಹಾಡಿದ ಹಾಡು... ಯಾವುದು? ಅಂತ ನಿರೂಪಕರು ನಿಲ್ಲಿಸೀ, ನಿಲ್ಲಿಸೀ ಕೇಳಿದರಂತೆ. ಅಪ್ಪನದು ಅಲ್ಲೇ ಎಡವಟ್ಟಾಗಿದ್ದು”

“ಏನಾಯ್ತು? ಜ್ಞಾಪಕ ಇರಲಿಲ್ವಾ?”

ಮುಂದಿನ ಪುಟ ನೋಡಿ ...

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

“ಹಾಡಿನ ಟ್ಯೂನ್ ಗೊತ್ತಿತ್ತು. ಆದರೆ ಹಾಡಿದ್ದು ಇವರೇ ಆ ಟ್ಯೂನಿಗೆ ಬರೆದಿದ್ದು ಅಣಕವಾಡು”

“ಟ್ಯೂನ್ ಯಾವುದು?”

“ಮನ ಮೆಚ್ಚಿದ ಹುಡುಗಿ ಚಿತ್ರದ ‘ತುಟಿಯ ಮೇಲೆ ತುಂಟ ಕಿರುನಗೆ’ ಹಾಡು”

“ನಿಮ್ಮಪ್ಪ ಬರೆದ ಲಿರಿಕ್ಸು?”

ತುಟಿಯ ಮೇಲೆ ಕ್ರೂರ ಬಿರುನಗೆ
ಮೊದ್ದುಮೊಗಕ್ಕೆ ಮಂಕು ಹೊದ್ದಿಕೆ
ಕಣ್ಣುಮೇಲಕೆ ಮೂಗು ಸೊಟ್ಟಗೆ
ಉಬ್ಬಿದಾ ಹಲ್ಲಿನ ಕುಳ್ಳುಮ್ಮಿಯೆ ॥

ನಿನ್ನ ಮೊಗ ಕಂಡ ಕ್ಷಣ ನಡುಗಿ ತಲ್ಲಣ
ಹೃದಯ ಬಡಿತ ನೂರು ದಾಟಿ ಓಡಿತಾಕ್ಷಣ
ಮನದಿ ಕಸಿವಿಸಿ ಮೈ ಬಿಸಿಬಿಸಿ
ಓಡಿ ಸೇರ್ದೆ ಅಂದೆ ನಾನು ನರ್ಸಿಂಗ್ ಹೋಮಿಗೆ ॥

“ಆಮೇಲೇನಾಯಿತು?”

“ಪೈಜ್ ಬಂತು”

“ಹೇಗೆ?”

“ಇಲ್ಲಿಗೆ ಬರುವ ಎಲ್ಲ ದಂಪತಿಗಳೂ ಸುಳ್ಳುಸುಳ್ಳೇ ಪ್ರದರ್ಶನ ನೀಡುತ್ತಿದ್ದರು. ಗಂಡನ ನಿಜವಾದ ಮನೋಗುಣ, ಹೆಂಡತಿಯ ನಿಜವಾದ ನಡತೆಯನ್ನು ತೋರಿಸಿದ ಇವರಿಗೆ ಪ್ರಾಮಾಣಿಕ ದಂಪತಿಗಳು ಅಂತ ಅವಾರ್ಡ್ ಕೊಡುತ್ತಿದ್ದೇವೆ ಎಂದರಂತೆ”

“ಗುಡ್. ನಿನ್ನ ಹೆಂಡತಿ ಸೀನಿಂಗಿಗೆ ಏನು ಕೊಡಿಸಿದೆ?”

“ಅದು ಇಲ್ಲಿಲ್ಲ. ಟೆಂಟ್‌ಹೌಸ್‌ನವರಿಗೆ ಹೇಳಿದ್ದೇನೆ. ಅವರು ಡೈರೆಕ್ಟ್ ಹೋಂ ಡೆಲಿವರಿ ಮಾಡ್ತಾರಂತೆ.”

“ಅಷ್ಟೊಂದು ಬಟ್ಟೆ ತೆಕ್ಕೊಟ್ಟೆಯಾ?”

“ತೆಕ್ಕೊಟ್ಟಿದ್ದು ಒಂದೇ ನೈಟಿ. ಆದರೆ ಅದು ಇರುವುದು ಶಾಮಿಯಾನಾದ ಸೈಝಾದ್ದರಿಂದ....”

“ಶಟಪ್. ಸೀನಿಂಗಿ ಅಷ್ಟೆಲ್ಲ ದಪ್ಪ ಇಲ್ಲ”

“ಮೊನ್ನೆ ಮೃಗಾಲಯಕ್ಕೆ ಹೋದಾಗ ಅವಳನ್ನು ಆನೆಯ ಪಕ್ಕ, ಫೇಂಡಾಮೃಗದ ಪಕ್ಕ ನಿಲ್ಲಲು ಬಿಡಲಿಲ್ಲ ಗೊತ್ತಾ...”

“ಯಾಕೆ?”

“ಇವಳ ಮುಂದೆ ಅವು ಕ್ಷಯರೋಗ ಪೀಡಿತ ಪ್ರಾಣಿಗಳಂತೆ ಕಾಣುವುದರಿಂದ”

“ನಿನ್ನ ತಂಗಿಗೆ?”

“ತಂಗಿ, ಮಗಳು ಸೆಪರೇಟ್ ಶಾಪಿಂಗ್ ಹೋಗಿದ್ದರು. ಇದೋ ಕಾಲೇಜಿಗೆ ಹೋಗುವ ತಂಗಿಗೆ ಹಬ್ಬಕ್ಕಾಗಿ ನೀಡಿದ ಉಡುಗೊರೆ.”

“ಓಹ್! ಫಿಶಿಂಗ್ ನೆಟ್ ಕೊಡಿಸಿದೆಯಾ? ಗುಡ್.”

“ಫಿಶಿಂಗ್ ನೆಟ್ ಅಲ್ಲ ಮಾರಾಯ. ಅದು ಅವಳ ಜೀನ್ಸ್ ಡ್ರೆಸ್. ”

ಮತ್ತೊಮ್ಮೆ ಅವಲೋಕಿಸಿದೆ. ಅದು ನನ್ನ ದೃಷ್ಟಿಗೆ ಕೇವಲ ಜೀನ್ಸ್ ಡ್ರೆಸ್ ಆಗಿ ಕಾಣಲಿಲ್ಲ. ಚಿಕ್ಕ ಮಕ್ಕಳು ಮಲಗಿರುವಾಗ ಅದನ್ನು ಕೊಕ್ಕೆಗೆ ಸಿಕ್ಕಿಸಿ ಇಳಿಬಿಟ್ಟರೆ ಸೊಳ್ಳೆಪರದೆಯಾಗುತ್ತದೆ; ಕ್ಯಾಂಪಿಂಗ್ ಎಂದು ಹೋದಾಗ ಅದರಲ್ಲೇ ಟೀ ಸೋಸಬಹುದು. ಸಮುದ್ರತೀರದಲ್ಲಿ ಮೀನಿನ ಬಲೆಯಾಗುತ್ತದೆ. ಕಾಲೇಜಿಗೆ ಧರಿಸಿಹೋದರೆ ಮೀನಿಗಿಂತಲೂ ಹೆಚ್ಚು ವೇಗದಲ್ಲಿ ಹುಡುಗರು ಬೀಳುತ್ತಾರೆ. ಅಂತೂ ಅದೊಂದು ವಿವಿಧೋದ್ದೇಶ ಬಟ್ಟೆಯಾಗಿತ್ತು.

“ನಿನ್ನ ಟೀನೇಜರ್ ಮಗನಿಗೆ?”

“ತೊಗೋ, ಈ ವಸ್ತುವಿನ ಮೇಲೆಯೂ ನಿನ್ನ ಮೆಚ್ಚುಗೆಯ ದೃಷ್ಟಿಯನ್ನು ಬೀರು”

ಮೆಕ್ಯಾನಿಕ್‌ಗಳು ಎಂಜಿನ್‌ನಿಂದ ಸೋರುವ ಎಣ್ಣೆಯನ್ನು ಒರೆಸಲು ಬಳಸಿದ ತುಂಡಿನಂತಿತ್ತು ಅದು! ಅದನ್ನು ಕೈಯಲ್ಲಿ ಹಿಡಿದಾಕ್ಷಣ ಅದೆಲ್ಲಿಂದಲೋ ನೊಣಗಳು ಬಂದು ಮುತ್ತಿಕೊಂಡವು.

“ಏನೋ ಇದು?” ಚಕಿತನಾಗಿ ಎರುದನಿಯಲ್ಲೇ ಕೇಳಿದೆ.

ಮುಂದಿನ ಪುಟ ನೋಡಿ ...

“ಜಾಹಿರಾತೊಂದರಲ್ಲಿ ‘ಡು ಯು ವಾಂಟ್ ಟು ಅಟ್ರಾಕ್ಟ್ ಫೀಮೇಲ್ಸ್? ಹಾಗಾದರೆ ನಮ್ಮ ಪಫ್ಯೂಮ್ಡ್ ಕ್ಲಾತ್‌ಗಳನ್ನು ಧರಿಸಿ. ಕೂಡಲೆ ನಿಮ್ಮ ಸುತ್ತಮುತ್ತ ಹೆಣ್ಣುಗಳು ಸುತ್ತುವುದು ಗ್ಯಾರಂಟಿ’ ಎಂದಿತಂತೆ. ಅದಕ್ಕೇ ಇದನ್ನು ತಂದಿದ್ದಾನೆ”

“ನಿಜಕ್ಕೂ ಹೆಣ್ಣುಗಳು ಸುತ್ತುತ್ತವೇನು?”

“ಸುತ್ತುತ್ತಿವೆಯಲ್ಲ, ಅವೆಲ್ಲವೂ ಹೆಣ್ಣು ನೊಣಗಳೆ”

“ಅದು ಹೇಗೆ ಹೇಳುತ್ತೀಯ?”

“ಒಂದು ಕ್ಷಣ ಆ ಬಟ್ಟೆಯನ್ನು ಒಳಗಿಡು. ನಿನಗೇ ತಿಳಿಯುತ್ತದೆ” ಎನ್ನುತ್ತಾ ಸೀನು ಚೀಲದಿಂದ ಒಂದು ಮೆನ್ಸ್ ಡಿಯೋಡೊರೆಂಟ್ ಬಾಟಲಿಯನ್ನು ಹೊರತೆಗೆದ.

ಆ ಚೆಂದಿಯನ್ನು ಜೇಬಿನಲ್ಲಿರಿಸಿಕೊಂಡೆ. ತಕ್ಷಣ ಆ ನೊಣಗಳು ಸೀನು ಅವನ ಅಮ್ಮನಿಗೆ ತಂದಿದ್ದ ಮೇಕಪ್ ಸೆಟ್‌ನ ಮೇಲೆ ಕುಳಿತವು.

“ನೋಡಿದೆಯಾ... ಗಂಡಾದರೆ ಡಿಯೋಡೊರೆಂಟ್ ಮೇಲೆ ಕೂರುತ್ತಿದ್ದವು. ಹೆಣ್ಣಾದ್ದರಿಂದ ಮೇಕಪ್‌ಸೆಟ್ ಮೇಲೆ ಕುಳಿತವು” ಎನ್ನುತ್ತಾ ವಿಜಯದ ನಗೆ ಬೀರಿದ.

“ನಿನ್ನ ಮಗನಿಗೆ ಜಾಹಿರಾತೆಂದರೆ ಅಷ್ಟೊಂದು ನಂಬಿಕೆಯೆ?”

“ಚಿಕ್ಕಪ್ಪನ ಕುಮ್ಮಕ್ಕು. ಅವನ ಜಾಹಿರಾತಿನ ಹುಚ್ಚು ನಿನಗೇ ತಿಳಿದಿದೆಯಲ್ಲ”

ಅಹುದು. ನೆನಪಿಗೆ ಬಂದಿತು. ಸೀನುವಿನ ತಮ್ಮ ಮೋನು ಆಕಾರದಲ್ಲಿ ಪೀಚು. ಹದಿಹರೆಯದ ಕಾಲ. ತನ್ನೆಲ್ಲ ಸ್ನೇಹಿತರಿಗೆ “ಹಾಯ್” ಎನ್ನುವ ಸುಂದರಿಯರ ಸ್ನೇಹವಿತ್ತು. ಇವನಿಗೆ ಕಚ್ಚುವುದೂ ಸಹ ಗಂಡು ಸೊಳ್ಳೆಯೇ! ಬೇಸರದಿಂದ ಟಿವಿ ಆನ್ ಮಾಡಿ ಕುಳಿತ. ಧಿಗ್ಗನೆದ್ದು “ಯುರೇಕಾ” ಎಂದು ಅರಚಿದ. ಕಾರಣ?

ಅದಾವುದೋ ಕಂಪನಿಯವರು “ನಮ್ಮ ಕಂಪನಿಯ ಬೀಡಿ ಸೇದಿದರೆ ಹುಡುಗಿಯರು ಬೀಳುತ್ತಾರೆ” ಎಂದಿತು. ಅಂದಿನಿಂದಲೇ ಮೋನು ಬೀಡಿ ಸೇದಲು ಆರಂಭಿಸಿದ. ನಂತರದ ದಿನಗಳಲ್ಲಿ ಎಲ್ಲಿ ಹೊಗೆಯ ಮೋಡವಿರುತ್ತದೋ ಅದರ ಕೆಳಗೆ ಮೋನು ಇರುತ್ತಾನೆ ಎನ್ನುವ ಮಟ್ಟಕ್ಕೆ ಫೇಮಸ್ ಆದ. ಕೆಲವೇ ದಿನಗಳಲ್ಲಿ ಸೂರು ಹಾರುವಂತೆ ಕೆಮ್ಮಲಾರಂಭಿಸಿದ. ಇವನು ಕೆಮ್ಮುವ ಪರಿಗೆ ಮೆಚ್ಚಿ ದೆಹಲಿಯ ಕೇಜ್ರೀವಾಲನು ‘ಬಾ ನನ್ನ ಕೆಮ್ಮಸಹೋದರ; ಒಬ್ಬನೇ ಕೆಮ್ಮಿ ಕೆಮ್ಮಿ ಬೇಸರವಾಗಿದೆ. ಕೆಮ್ಮಿನಲ್ಲೇ ಹೊಸಹೊಸ ಲಿರಿಕ್ಸ್ ಕಂಡುಹಿಡಿಯೋಣ, ಡ್ಯುಯೆಟ್ ಹಾಡೋಣ’ ಎಂದು ಕರೆಕಳುಹಿಸಿದನಂತೆ. ಮೊದಲೇ ಕೃಶಾಂಗನಾದ ಅವನು ಈಗ ಸೆಲ್ಫಿ ಸ್ಟಿಕ್‌ನಂತೆ ಆಗಿಬಿಟ್ಟಿದ್ದ.

ಕೆಲವು ದಿನಗಳ ಆರೈಕೆಯ ನಂತರ ಮತ್ತೆ ಒರಿಜಿನಲ್ ಕೃಶಾಂಗನ ಶೇಪ್ ತಲುಪಿದ ಅವನಿಗೆ ಜಾಹಿರಾತೊಂದು “ಕುಡಿಯಿರಿ. ಕುಣಿಯಿರಿ. ಕುಣಿದು ಸೆಳೆಯಿರಿ ಗೆಳೆಯರನ್ನು, ಹೆಂಗಳೆಯರನ್ನು. ಠಂಠಢಾಣ್...” ಎಂದಿತಂತೆ. ಮೋನು ದೇವದಾಸನಾದ; ಪಾರೂ ಬರಲಿಲ್ಲ; ಬರೀ ರೋಮಿಯೋ ಆಗದೆ ರೋಡ್ ರೋಮಿಯೋ ಆದ; ತೊಟ್ಟಿಯ ಪಕ್ಕದಲ್ಲಿ ಕುಳಿತು ಉಮರ್ ಖಯ್ಯಾಮನ ಗೀತೆಗಳನ್ನು ಕಿರುಕಿರುಕಿರುಚಿ ಹಾಡಿದ. ಅಗಸನ ಕತ್ತೆ, ಬೀಡಾಡಿ ನಾಯಿಗಳು ಕೋರಸ್ ಕೂಗಿದವು.

ಚೋಕ್ರೀ ಬೀಳಲಿಲ್ಲ.

ಇವನೇ ಮೋರಿಗೆ ಬಿದ್ದ.

ಕುಡಿತದಿಂದ ಅವನನ್ನು ಹಾಗೂ ಹೀಗೂ ಹೊರತರಲಾಯಿತು. ಆದರೆ ಹುಡುಗಿಯ ಹುಚ್ಚು ಬಿಡಬೇಕಲ್ಲ! ಅದಾವುದೋ ಪೀಡ್ಜಾವೊಂದು ಬೀದಿಯಲ್ಲಿ ಇಡಲ್ಪಟ್ಟಿತ್ತು. ಸುತ್ತಮುತ್ತಲಿನ ನಾಯಿಗಳಾಗಲಿ, ಕಾಗೆಗಳಾಗಲಿ ಅದರ ಸುತ್ತ ಸುಳಿದಿರಲಿಲ್ಲ. ಆದರೆ ಅದಾವುದೋ ಬೆಟ್ಟದ ಶಿಖರದಿಂದ, ಹದ್ದಿಗೂ ಕಾಣದ ಆ ಪೀಡ್ಜಾ ತುಂಡು ಯುವಕನೊಬ್ಬನ ಕಣ್ಣಿಗೆ ಕಾಣುತ್ತದೆ. ತಕ್ಷಣ ಅವನು ಶಿಖರದಿಂದ ನೇರವಾಗಿ ಅಲ್ಲಿಗೆ ಹಾರುತ್ತಾನೆ. ಸಂಪಾದನೆ ಮಾಡದೆ, ಬೀದಿಯಲ್ಲಿ ಬಿದ್ದಿರುವ ಈ ತಿಂಡಿಯ ತುಂಡನ್ನು ತಿನ್ನಲು ಅವನು ಮಾಡಿದ ಸಾಹಸವನ್ನು ಕಂಡ ತುಂಡುಡುಗೆಯ ಲಲನೆಯರ ಗುಂಪೊಂದು ಅವನ ಸುತ್ತ ಸೇರುತ್ತದೆ. ಇದನ್ನು ಕಂಡ ದಿನವೇ ಮೋನು ಅದೇ ಶಿಖರವನ್ನು ಏರಿ ಹಾರಲು ಹೋಗಿದ್ದ. ಅಲ್ಲಿದ್ದ ಪೊಲೀಸರು “ಆತ್ಮಹತ್ಯಾ ಪ್ರಯತ್ನ” ಎನ್ನುತ್ತಾ ಅವನನ್ನು ಅರೆಸ್ಟ್ ಮಾಡಿದರು.

ಇಂತಹ ಮೋನು ಈಗ ಸೀನುವಿನ ಮಗನಿಗೆ ರೋಲ್ ಮಾಡೆಲ್!

“ಚಿಕ್ಕಪ್ಪನ ಕಲ್ಯಾಣಗುಣಗಳನ್ನು ನಿನ್ನ ಮಗನಿಗೆ ಹೇಳಿದೆಯಾ?”

“ನೀನೇ ಒಮ್ಮೆ ಹೇಳಿಬಿಡು ಗುರುವೆ”

“ನಾನೇ? ಏಕೆ?”

“ಮಕ್ಕಳು ಬೀದೀಲಿ ಹೋಗೋವ್ರ ಮಾತು ಬೇಕಾದ್ರೂ ಕೇಳ್ತಾರೆ. ಅಪ್ಪ ಅಮ್ಮನ ಮಾತು ಕೇಳಲ್ಲ, ಅದಕ್ಕೆ”

ನನಗೆ ಬೀದೀಲಿ ಹೋಗೋವ್ನು ಅನ್ನೋ ಸರ್ಟಿಫಿಕೇಟ್! ಹಬ್ಬದ ದಿನವೇ ಜಗಳವೇಕೆಂದು ಅವನ ಮಾತನ್ನು ಬೇವಿನಂತೆ ನುಂಗಿಕೊಳ್ಳುತ್ತಾ,

“ಸರಿ. ಹೇಳುತ್ತೇನೆ. ನಿನ್ನ ತಮ್ಮನಿಗೆ ಯಾವ ಬಟ್ಟೆ?” ಎಂದೆ.

“ಟೀ ಶರ್ಟ್‌ಗಳು” ಎನ್ನುತ್ತಾ ಮೂರು ಟಿ ಶರ್ಟ್‌ಗಳನ್ನು ತೆಗೆದ.

ಮುಂದಿನ ಪುಟ ನೋಡಿ ...

ಒಂದರ ಮೇಲೆ 'ಖಾಲಿ ಇದೆ' ಎಂಬ ಬರಹ ಇತ್ತು.

"ಗುಡ್. ನೋಟು ನಿಷೇಧದ ನಂತರ ಹಲವಾರು ಕಟ್ಟಡಗಳು ಖಾಲಿಯಾಗಿವೆ. ಅವುಗಳ ಗೇಟಿಗೆ ಇದನ್ನು ಸಿಕ್ಕಿಸಿ ಬೋರ್ಡ್‌ಗಳಿಗೆ ನೀಡುವ ಅರ್ಧ ಖರ್ಚನ್ನು ಪಡೆದರೂ ಒಳ್ಳೆಯ ವ್ಯಾಪಾರ. ಗುಡ್ ಇನ್‌ವೆಸ್ಟ್‌ಮೆಂಟ್. ಮೇಕ್ ಇನ್ ಇಂಡಿಯಾಗೆ ಒಳ್ಳೆಯ ಉದಾಹರಣೆ" ಎಂದೆ.

ಇನ್ನೊಂದರ ಮೇಲೆ "ನಿನಗಾಗಿ ಓಡೋಡಿ ಬಂದೆ" ಎಂದು ಬರೆದಿತ್ತು.

"ನಿನ್ನ ತಮ್ಮ ಪೀಡ್ಜಾ ಡೆಲಿವರಿ ಬಾಯ್ ಆಗಿದ್ದಾನೇನು?" ಎಂದೆ.

ಮೂರನೆಯದರ ಮೇಲೆ "ಎ ದಿಲ್ ಮಾಂಗೇ ಮೋರ್" ಎಂದಿತ್ತು.

"ಇದನ್ನು ತೊಟ್ಟು ಚೆನ್ನೈಗಾಗಲಿ, ಉತ್ತರಭಾರತಕ್ಕಾಗಲಿ ಹೋಗಬಬೇಡ ಎನ್ನು" ಎಂದೆ.

"ಏಕೆ?"

"ಚೆನ್ನೈನಲ್ಲಿ ಇದನ್ನು ನೋಡಿದವರೆಲ್ಲ ಅವನಿಗೆ ಮಜ್ಜಿಗೆ ಬೇಕೆಂದುಕೊಳ್ಳುತ್ತಾರೆ. ಕಾಫಿ, ಟೀ, ವಗೈರೆ ಕುಡಿಸದೆ ಮಜ್ಜಿಗೆಯನ್ನೇ ಕುಡಿಸುತ್ತಾರೆ. ತಮಿಳಿನಲ್ಲಿ ಮೋರ್ ಎಂದರೆ ಮಜ್ಜಿಗೆ"

"ಉತ್ತರಭಾರತದಲ್ಲಿ?"

"ಮೋರ್ ಎಂದರೆ ನವಿಲು. ಇವನು ನವಿಲು ಕೇಳುತ್ತಿದ್ದಾನೆ ಎಂದು ಭಾವಿಸಿ ಪ್ರಾಣಿದಯಾ ಸಂಘದವರು ಇವನ ಮೇಲೆ ಕೇಸ್ ಹಾಕಿ ಒಳಗೆ ಹಾಕಿಬಿಡುತ್ತಾರೆ"

"ನಿನ್ನದು ಯಾವಾಗಲೂ ಕೊಂಟೆ ಬುದ್ಧಿಯೇ" ಮತ್ತೊಂದು ಸರ್ಟಿಫಿಕೇಟ್ ನೀಡಿದ ಸೀನು.

"ಥ್ಯಾಂಕ್ಸ್ ಫಾರ್ ದ ಕಾಂಪ್ಲಿಮೆಂಟ್. ಮಗಳು ಏನು ಖರೀದಿಸಿದಳು?"

ಸೀನು ಪರ್ಸಿನಿಂದ ಫೋಟೋವನ್ನು ತೆಗೆದು ಕೈಗೆ ನೀಡುತ್ತಾ "ಖರೀದಿಸಲಿಲ್ಲ. ಸರಿಯಾಗಿ ಬೋಳಿಸಿದಳು. ನೋಡಿಲ್ಲಿ" ಎಂದ.

"ಇದೇನೋ ಇದು ತುಟಿಗೆ ನೇರಳೆ ಬಣ್ಣದ ಕಲರ್ರೂ...?" ಎಂದೆ.

"ಯುಗಾದಿಯ ಬೇವಿಗೆ ಮ್ಯಾಚಿಂಗ್ ಆಗಬೇಕಂತೆ"

"ಮೂಗಿಗೆ ಹಾಕಿರುವ ರಿಂಗ್ ಬಾಯಿ ತೆರೆಯಲು ಅಡ್ಡಬರುತ್ತದಲ್ಲವೆ?"

"ನಿಜ. ಡಯಟಿಂಗ್‌ಗೆ ಅದು ಅನುಕೂಲಕರವಂತೆ. ಕೈಗೆ, ಬಾಯ್ಗೆ ಸಂಬಂಧ ತಪ್ಪಿಸಿದರೆ ಮಾತ್ರ ಸ್ಲಿಮ್ ಆಗಿರಲು ಸಾಧ್ಯ ಅಂತ ಬ್ಯೂಟಿಷಿಯನ್ ಜ್ಯೋತಿಷಿ ಹೇಳಿದಳಂತೆ"

"ಬ್ಯೂಟಿಷಿಯನ್ ಜ್ಯೋತಿಷಿ? ಹಾಗೆಂದರೆ ಏನೋ?"

"ಯಾವ ಯಾವ ದಿನ ಯಾವ ಯಾವ ಲಿಪ್‌ಸ್ಟಿಕ್ ಹಾಕಿಕೊಳ್ಳಬೇಕು ಎಂದು ಹೇಳುತ್ತಾರೆ. ಜನ್ಮಸ್ಥಾನದಲ್ಲಿ ಶನಿ ಇರುವವರು ಕಪ್ಪು ಲಿಪ್‌ಸ್ಟಿಕ್ ಹಚ್ಚಿಕೊಳ್ಳಬೇಕಂತೆ. ಯಾವ ರಾಶಿಯವರಿಗೆ ಯಾವ ಹೇರ್ ಕ್ಲಿಪ್ ಆಕಾರ ಶುಭ ಎಂದೂ ಹೇಳುತ್ತಾರೆ. ಯಾವ ನಕ್ಷತ್ರದಲ್ಲಿ ಹುಟ್ಟಿದವರಿಗೆ ಯಾವ ತರಹದ ಹೇರ್‌ಸ್ಟೈಲ್ ಎಂಬುದೂ ಇದೆ. ಧನುಸ್ಸು ರಾಶಿಯವರದು ಬಾಣ ಅಲ್ವಾ, ಆದ್ದರಿಂದ ಸ್ಟ್ರೈಟ್ ಹೇರ್ಸ್ ಇರಬೇಕಂತೆ. ವೃಷಭ ರಾಶಿಯವರ ವೃಷಭದ ಕೊಂಬು ಸೊಟ್ಟ ಇರುವುದರಿಂದ ಕರ್ಲಿ ಹೇರ್ಸ್ ಇರಬೇಕಂತೆ, ಕರ್ಕಾಟಕ ರಾಶಿಯವರದು ಏಡಿಯ ಓಡಾಟದಂತೆ ಅಡ್ಡಾದಿಡ್ಡಿಯಾದ ಕೂದಲುಗಳು ಇರಬೇಕಂತೆ. ಇವಳದು ಸಿಂಹರಾಶಿಯಾದ್ದರಿಂದ ಕತ್ತಿನ ಸುತ್ತ ಕೂದಲಿರಬೇಕಂತೆ. ಅದಕ್ಕೇ ಬಾಬ್ ಕಟ್ ಮಾಡಿದ್ದಾಳೆ"

"ಹಣೆಗೆ ಏನೋ ಮೆತ್ತಿಕೊಂಡಿದೆಯಲ್ಲೋ... ಫೋಟೋ ತೆಗೆಯೋವಾಗ ನೋಡ್ಕೋಬಾರ್ದಾ..."

"ಅದು ಮೆತ್ತಿರೋದಲ್ಲ, ಟ್ಯಾಟೂ... ನಮ್ಮ ಅಜ್ಜಿ, ಅಡುಗೂಲಜ್ಜಿಯರು ಹಾಕಿಕೊಳ್ಳುತ್ತಿದ್ದ ಹಚ್ಚೆ ಅದು. ಲೇಟೆಸ್ಟ್ ಟ್ರೆಂಡ್"

"ಭುಜದ ಮೇಲೆ ಏನೋ ಸ್ಟ್ಯಾಂಡ್ ಇದ್ದಹಾಗಿದೆ?"

"ಹೌದು. ಇಯರ್ ರಿಂಗ್ಸ್ ಬಹಳ ಭಾರ ಆದರೆ ಕಿವಿ ಜಗ್ಗುವುದರಿಂದ ಭುಜಕ್ಕೆ ಇಯರ್ ರಿಂಗ್ ಸ್ಟ್ಯಾಂಡ್ ಫಿಕ್ಸ್ ಮಾಡಿರ್ತಾರೆ. ಲೇಟೆಸ್ಟ್ ಫ್ಯಾಶನ್ ಅದು"

"ಸರಿ. ಇಷ್ಟೆಲ್ಲ ಮಾಡ್ ಆದ ತಲೆ ಕೆಟ್ಟ ಈ ಮಾಡಲ್ ಯಾರಯ್ಯ?"

"ನನ್ನ ಮಗಳು. ಬ್ಯೂಟಿ ಪಾರ್ಲರ್ ಖರ್ಚುಗಳೇ ಅವಳು ನನ್ನಿಂದ ಅಪೇಕ್ಷಿಸಿ, ಪಡೆದ ಯುಗಾದಿ ಗಿಫ್ಟ್" ಎಂದ ಸೀನು.

ಸೊಗಸಾದ ಕೇಶವಿದ್ದು, ಲಕ್ಷಣವಾಗಿದ್ದ ಅವನ ಮಗಳ ಈಗಿನ ಅವಲಕ್ಷಣತೆಗೆ ಮರುಗುತ್ತಾ "ಎಲ್ಲವೂ ಸರಿ. ನಿನಗೇನು ತೆಗೆದುಕೊಂಡೆ?" ಎಂದೆ.

ಸೀನು ಕ್ರೆಡಿಟ್ ಕಾರ್ಡ್ ಬಳಸಿ ಸುರುಳಿಸುರುಳಿಯಾಗಿ ಎಟಿಎಂನಿಂದ ಹೊರತೆಗೆದ ವಿತ್‌ಡ್ರಾಲ್ ಸ್ಲಿಪ್‌ಗಳನ್ನು ಗುಡ್ಡೆ ಹಾಕಿದ. ▪



ವಿಕ್ರಂ ಬೇತಾಳ - ವಧು ಪರೀಕ್ಷೆ

ಕನಕಾಪುರ ನಾರಾಯಣ

ರಾಜೇಂದ್ರನೆಂಬ ರಾಜ ಮತ್ತು ಪ್ರೇಮವತಿ ಎಂಬ ರಾಣಿಗೆ ಮದುವೆಯಾಗಿ ಬಹಳ ಕಾಲದ ನಂತರ ಒಂದು ಸುಂದರ ಹೆಣ್ಣುಮಗು ಜನಿಸಿತು. ಅದಕ್ಕೆ ಸೋನಾ ಎಂದು ನಾಮಕರಣ ಮಾಡಿದರು. ಮುದ್ದಿನ ಕುಮಾರಿ ಸೋನಾಗೆ ಪ್ರೀತಿಯಿಂದ ಕೇಳಿದ್ದನ್ನೆಲ್ಲಾ ಕೊಟ್ಟು, ಒಳ್ಳೆ ವಿದ್ಯೆ ಬುದ್ಧಿ ಕಳಿಸಿದರು. ಕುದುರೆ ಸವಾರಿ, ಕತ್ತಿ ವರಸೆ, ಬಿಲ್ಲು ಬಾಣ, ಕುಸ್ತಿ ಇನ್ನೂ ಅನೇಕ ವಿದ್ಯೆಗಳಲ್ಲಿ ನಿಸ್ಸೀಮಳಾದಳು.

ಆಕೆಯ ಮದುವೆಯ ವಯಸ್ಸಾಗುತ್ತಿದ್ದಂತೆ ತಂದೆಯ ಬಳಿ ಹೋಗಿ "ಯಾರು ತನ್ನನ್ನು ಕತ್ತಿ ವರಸೆಯಲ್ಲಿ ಸೋಲಿಸಬಲ್ಲರೋ ಅವರನ್ನು ಮಾತ್ರ ನಾನು ವರಿಸಬಲ್ಲೆ"ಎಂದಳು. ಅಂತೆಯೇ ಕತ್ತಿ ಕಾಳಗ ಮಾಡಿ ಅವಳನ್ನು ವರಿಸಲು ರಾಜಕುಮಾರರು ಸಾಲಾಗಿ ಬಂದರು, ಸೋತು ಹಿಂತಿರುಗಿದರು.

ಉದಯಕುಮಾರ ಎಂಬ ರಾಜಕುಮಾರ ಸುದ್ದಿ ಕೇಳಿ ಅಲ್ಲಿಗೆ ಬಂದ, ಬಹಳ ಹೊತ್ತು ಅವಳ ಜೊತೆ ಕತ್ತಿ ವರಸೆ ನಡೆಯಿತು, ಆಕೆಯ ಎಲ್ಲಾ ತಂತ್ರವನ್ನು ಅರಿತ, ಆಕೆಯನ್ನು ಸೋಲಿಸುವ ಕತ್ತಿ ಕಾಳಗ ವಿದ್ಯೆಯ ಜಾಣತನ ಕಲಿತ ನಂತರ ಆಕೆಯನ್ನು ಸೋಲಿಸಿದ. ನಂತರ ಆಕೆಯನ್ನು ತಾನು ಮದುವೆ ಆಗಲಾರೆ ಎಂದ, ಆಕೆಯೂ ಹಾಗೆ ಹೇಳಿದಳು. ಎಂದು ಹೇಳಿ ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೆನ್ನು ಹತ್ತಿದ ಬೇತಾಳ ಕಥೆ ಹೇಳಿ, ಪ್ರಶ್ನೆ ಕೇಳಿ ವಿಕ್ರಮಾದಿತ್ಯನ ಬುದ್ಧಿ ಮತ್ತೊಮ್ಮೆ ಪರೀಕ್ಷೆ ಮಾಡುತ್ತಿತ್ತು. ವಿಕ್ರಮನು ಮೌನವಾಗಿದ್ದರೆ ತಲೆ ಸಿಡಿದುಬಿಡುತ್ತದೆ, ನ್ಯಾಯವಾದ ಉತ್ತರವಿಲ್ಲದಿದ್ದರೆ ಆತನ ಹೆಸರಿಗೆ ಕಳಂಕ ಎಂದು ಹೆದರಿಸಿತು.

ಬೇತಾಳದ ಪ್ರಶ್ನೆ: "ಅವರು ಯಾಕೆ ಸ್ವಯಂವರ ಮಾಡಿಕೊಳ್ಳಲಿಲ್ಲ?" ಎಂದು

ವಿಕ್ರಮನ ತತ್ಕ್ಷಣದ ಉತ್ತರ: "ಆಕೆಯನ್ನು ಸೋಲಿಸುವ ವಿದ್ಯೆ ಆಕೆಯಿಂದಲೇ ಕಲಿತ ಉದಯಕುಮಾರನಿಗೆ ಆಕೆ ಆಕ್ಷಣಕ್ಕೆ ಗುರುವಾದಳು, ಗುರುವನ್ನೇ ವರಿಸುವುದು ಅಪರಾಧ ಎನ್ನುವುದು ಇಬ್ಬರೂ ಅರಿತರು" ಎಂದನು. ಕೂಡಲೇ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪

ಅರಿಶಿನ ದೋಸೆ/ಮಂಜಳ್ ದೋಸೆ (ಉಡುಪಿ ಶೈಲಿ)

ಬೇಕಾಗುವ ಸಾಮಗ್ರಿಗಳು

- ಅಕ್ಕಿ ಮೂರು ಲೋಟ
- ಉದ್ದು ಒಂದು ಲೋಟ
- ಮೆಂತ್ಯ ಉಪ್ಪು ಒಂದೊಂದು ಚಮಚ
- ಹಸಿ ಅರಿಸಿನ ಎರಡು ತುಂಡು

ಮಾಡುವ ವಿಧಾನ

- ಅಕ್ಕಿ,ಅರಿಸಿನ,ಮೆಂತ್ಯ ಜೊತೆಯಾಗಿ ನೆನೆಸಿ ನುಣ್ಣಗೆ ರುಬ್ಬಿ
- ಉದ್ದನ್ನು ಪ್ರತ್ಯೇಕ ನೀರಿನಲ್ಲಿ ಮೂರು ಘಂಟೆ ನೆನೆಸಿ
- ಉದ್ದನ್ನು ತೊಳೆದು ನುಣ್ಣಗೆ ನೀರಿಲ್ಲದೇ ರುಬ್ಬಿ
- ಎರಡನ್ನೂ ಉಪ್ಪು ಹಾಕಿ ಆರೇಳು ಘಂಟೆ ಹುದುಗಲು ಬಿಡಿ
- ಕಾದ ಕಾವಲಿಗೆ ಎಣ್ಣೆ ಸವರಿ ದೋಸೆ ಹುಯ್ಯಿರಿ
- ಮೂಲಂಗಿ ಅಥವಾ ಪುದೀನಾ ಚಟ್ನಿ ಜೊತೆಗೆ ತಿನ್ನಲು ಚೆನ್ನ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಅಜ್ಜನ್ನ ಹೊಟ್ಟೆ ಹಿಡ್ಕೊಂಡು , ಮೊಮ್ಮಗ ನೇತಾಡ್ತಾನೆ

೨. ತಂದವರೊಬ್ಬರು ! ಹಿಡಿದವರೊಬ್ಬರು ! ಹೊತ್ತವರೊಬ್ಬರು

ಉತ್ತರಕ್ಕೆ ಪುಟ ೧೩ ನೋಡಿ

ಭವ್ಯ ರಾತ್ರಿ ...

ಸಣ್ಣ ದೀಪ ಉರಿದ ರಾತ್ರಿ
ತಣ್ಣನೆಲರು ಸುಳಿದ ರಾತ್ರಿ
ಚೆನ್ನ ನಿನ್ನ ಕಣ್ಣಿನಲ್ಲಿ
ಬೆರತ ರಾತ್ರಿಯು

ವೀಣೆಯನ್ನು ಮಿಡಿದ ರಾತ್ರಿ
ನೀನೆ ಮೊಲ್ಲೆಯಿತ್ತ ರಾತ್ರಿ
ಆಣೆ ಮಾಡಿ ಮನದ ಮೊರೆತ
ಅರಿತ ರಾತ್ರಿಯು

ತೋಳುಗಳಲಿ ಉಳಿದ ರಾತ್ರಿ
ತಾಳಗಳಿಗೆ ಉಲಿದ ರಾತ್ರಿ
ಬಾಳಲೆಂದು ಹಾಲು ಕುಡಿದ
ನವ್ಯ ರಾತ್ರಿಯು
ಬೆಟ್ಟಗಳಲಿ ಅಲೆದ ರಾತ್ರಿ
ಗುಟ್ಟುಗಳನು ಸುಲಿದ ರಾತ್ರಿ
ಕಟ್ಟಕಡೆಗೆ ಕೊಟ್ಟು ಕೊಂಡ
ಭವ್ಯ ರಾತ್ರಿಯು

-ಮಾಲು, ಅಡಿಲೈಡ್

ಲಾಲಿ ಹಾಡವ್ವ ಕಾವ್ಯಮಾತೆ ...

ನಂಜಿರದ ಮನದಲ್ಲಿ ಉದ್ಭವಿಪ ವಾಗ್ಝರಿಯೆ
ತಪ್ತಮನಕಾಹ್ಲಾದ ಕೊಡೊ ಅಂಬಿಕೆ
ಕರಣಕಾರಣಕೆಲ್ಲ ಕಲ್ಪನೆಯ ಕಲ್ಪವೇ
ಕಾರುಣ್ಯಪೂರಿಣಿಯೆ ಕಾವ್ಯಾಂಬಿಕೆ

ಕಲ್ಪದಿಂ ನೀ ಜನಿಸಿ ಕಲ್ಪದೊಳು ಸೊಗವಿರಿಸಿ
ಕವಿಮಿತ್ರರೆಲ್ಲರೊಳು ಇರುವ ಮಾಯೆ
ಚಾರುವಾಕ್ಯಗಳನ್ನೆ ಸೃಷ್ಟಿಸುವ ಲಯವಿರಿಸಿ
ಕರಣಕಾನಂದದಾ ಸುಧೆಯ ತಾರೆ

ಬೊಮ್ಮನರಿಸಿಯೆ ಮಾತೆ ಕೈವಲ್ಯ ಪ್ರಖ್ಯಾತೆ
ಸೃಷ್ಟಿಸಿರಿ ಬಗೆಯನುನ್ಮೀಲಗೊಳಿಸೆ
ಪದಪದದೊಳವತರಿಸೆ ಛಂದಬಂಧದ ವನಿತೆ
ಹೃನ್ಮನದ ಬನಸಿರಿಯ ನನ್ನೊಳಿರಿಸೆ

ಬನದತೊರೆಯಲಿ ಮಿಂದು ಬನಶಂಕರಿಯ ಕಂಡು
ಚಿದಂಬರ ರಹಸ್ಯವನು ಕೇಳಿಬರುವೆ
ಆ ಹೊತ್ತಲೂ ಕೂಡ ನೀ ಸಲಹ ಬೇಕೆಂದು
ಕಾವ್ಯ ಕನ್ನಿಕೆ ನಿನ್ನ ಕೇಳುತಿರುವೆ

ಬನದವ್ವ ತೊಟ್ಟಿಲೊಳು ನನ್ನ ತೂಗುತಲಿರಲು
ಮತ್ತೆ ಪಡೆಯುವೆ ನಾ ಆನಂದವಂ
ಸಂತೋಷದಿಂ ನೀನು ಲಾಲಿ ಹಾಡುತಲಿರಲು
ಸುಖಿಸುವೆನಾಲಿಸುತ ವಾಗ್ವೈಭವಂ

-ಬದರಿ ತ್ಯಾಮಗೊಂಡ್ಲು

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ



ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಮೇ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮಾರ್ಚ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಕೆ. ಎಸ್ ನವೀನ್, ಮಧುಗಿರಿ
- ಸೌಮ್ಯ ಶ್ರೀನಾಥ್, ತುಮಕೂರು
- ಗಾಯತ್ರಿ ರಾವ್, ಬೆಳಗಾಂ
- ಮೋಹನ್ ಭಾರದ್ವಾಜ್, ಬೆಂಗಳೂರು



ಜಾಣ ಕರ್ನಾಟಕ

೧. ವರ್ಷ ೨೦೧೬ರ ಸಾಲಿನಲ್ಲಿ ಕನ್ನಡದ ಮೊದಲ ಅತ್ಯುತ್ತಮ ಚಲನಚಿತ್ರ, ಶ್ರೇಷ್ಠ ನಿರ್ದೇಶಕ, ಮತ್ತು ಶ್ರೇಷ್ಠ ನಟ ಪ್ರಶಸ್ತಿಗಳು ಒಂದೇ ಚಿತ್ರಕ್ಕೆ ದೊರೆತಿವೆ. ಆ ಚಿತ್ರ ಯಾವುದು? ಪ್ರಶಸ್ತಿ ಪಡೆದಿರುವ ಅದರ ನಿರ್ದೇಶಕರು ಮತ್ತು ನಾಯಕ ನಟರು ಯಾರು?

೨. ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿರುವ ನಟಿ ಯಾರು ಮತ್ತು ಯಾವ ಚಿತ್ರದ ನಟನೆಗಾಗಿ?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಒಗಟು - ಉತ್ತರ

೧. ಗೇರುಬೀಜ ೨. ಬಳೆ

ಹಾಸ್ಯ ಚಿಲುಮೆ

ತಂದೆ: ಯಾವೋನೋ ಅವ್ನು ಲೆಕ್ಕದಲ್ಲಿ ನೂರಕ್ಕೆ ಹತ್ತೇ ಹತ್ತೆ?ಎಲ್ಲಿದಾನೋ ಅವ್ನು!

ಮಗ: ಅದೇ ನಾನೂ ಕೇಳ್ಬೇಕೂ ಅಂದ್ಕೊಂಡೆ,ನಡಿರೀಪ್ಪ ನಂಗೊತ್ತು ಮೇಷ್ಟ್ರ ಮನೆ.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ನೀವು ಮಾಡಿ

ಬ್ರೆಡ್, ದೋಸೆ, ಇಡ್ಲಿಗಳಲ್ಲಿ ತೂತೇಕೆ ?

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಾನು:

ಈಸ್ಟ್ - 2 ಚಮಚ
ಪ್ಲಾಸ್ಟಿಕ್ ಬಾಟಲ್ - 1
ಸಕ್ಕರೆ - 1 ಚಮಚ
ಸ್ವಲ್ಪ ಬೆಚ್ಚಗಿನ ನೀರು
ಬಲೂನ್ - 1

ವಿಧಾನ:

ಬಾಟಲ್ ಗೆ ಬೆಚ್ಚಗಿನ ನೀರು ಹಾಕಿ ನಂತರ ಈಸ್ಟ್ ಮತ್ತು ಸಕ್ಕರೆ ಹಾಕಿ ಬಲೂನಿನ ಮೂತಿಯನ್ನು ಬಾಟಲಿನ ಬಾಯಿಗೆ ಬಿಗಿಯಾಗಿ ಇಡಿ. ಬಲೂನ್ ಬಾಟಲಿನ ಬಾಯಿಗೆ ಗಟ್ಟಿಯಾಗಿ ಕೂತುಕೊಳ್ಳಬೇಕು. ಹಾಗಿಲ್ಲದಿದ್ದರೆ, ದಾರದಿಂದ ಬಿಗಿಯಿರಿ. ಒಂದಷ್ಟು ಘಂಟೆ ಹಾಗೆ ಬಿಡಿ. ಬಲೂನ್ ಉದಿಕೊಳ್ಳಲು ಶುರುವಾಗುತ್ತದೆ.

ಏನಾಗುತ್ತಿದೆ:

ಈಸ್ಟ್ ಒಂದು ಸೂಕ್ಷ್ಮಾಣು ಜೀವಿ. ಅದು ಬೆಚ್ಚಗಿನ ವಾತಾವರಣದಲ್ಲಿ ಮಾತ್ರ ವೃದ್ಧಿಸುತ್ತದೆ. ಸಕ್ಕರೆ ಹಾಕಿರುವುದರಿಂದ ಅದನ್ನು ತಿಂದು ಅದು ಬೆಳೆಯಲು ಅನುಕೂಲವಾಗುತ್ತದೆ. ಹಾಗೆ ಸಕ್ಕರೆಯನ್ನು ತಿಂದು ಅದು ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಬಿಡುಗಡೆ ಮಾಡುತ್ತದೆ. ಅದೇ ಬಲೂನ್ ಉದಲು ಕಾರಣ. (ದೋಸೆ ಹಿಟ್ಟು ಥಂಡಿ ಇದ್ದರೆ ಸರಿಯಾಗಿ ಹುದುಗು ಬರದಿರಲು ಈ ಸೂಕ್ಷ್ಮಾಣು ವೃದ್ಧಿಸದಿರುವುದೇ ಕಾರಣ)

ಇದೇ ರೀತಿ, ಹುದುಗು ಬರುವ ತಿಂಡಿಗಳಲ್ಲಿ (ಬ್ರೆಡ್, ದೋಸೆ, ಇಡ್ಲಿ ಇತ್ಯಾದಿ), ಈಸ್ಟ್ ಎಂಬ ಈ ಜೀವಾಣು ಅನಿಲವನ್ನು ಬಿಡುಗಡೆ ಮಾಡಿ ಹಿಟ್ಟು ಉಬ್ಬುವಂತೆ ಮಾಡಿರುತ್ತದೆ. ಆದರೆ ಎಲ್ಲ ಗಾಳಿಯೂ ಹೊರ ಹೋಗಲು ಆಗಿರುವುದಿಲ್ಲ. ಆ ಹಿಟ್ಟನ್ನು ಓವೆನ್ ನಲ್ಲಿ ಅಥವಾ ಕುಕ್ಕರ್, ಕಾವಲಿ ಮೇಲೆ ಬೇಯಿಸಿದಾಗ, ಶಾಖದ ಪ್ರಭಾವದಿಂದ ಅನಿಲವು ಆಚೆ ಹೋಗಿ ಆ ಜಾಗವು ಬರಿದಾಗಿ, ರಂದ್ರಗಳಿಂದ ಇರುವು ಪದಾರ್ಥವಾಗುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಮೊದಲ ಅತ್ಯುತ್ತಮ ಚಿತ್ರ ಅಮರಾವತಿ, ನಿರ್ದೇಶಕ ಟಿ.ಎಂ ಗಿರಿರಾಜ್, ಶ್ರೇಷ್ಠ ನಟ ಅಚ್ಯುತ್ ಕುಮಾರ್.
೨. ಅತ್ಯುತ್ತಮ ನಟಿ ಶ್ರುತಿ ಹರಿಹರನ್, ಚಿತ್ರ ಬ್ಯೂಟಿಫುಲ್ ಮನಸುಗಳು.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಶಂಕರ ಜಯಂತಿ

13 MAY 2017

TIME : 10 AM onwards
VENUE : Minto Shiva Mandira
201, Eagleview Road, Minto, NSW 2566

ಸಂಪರ್ಕಿಸಿ: Narayana – 0423634979, Arun Sharma - 0404004568

Buddha's Birthday Festival - Sydney

ದಿನಾಂಕ: ಮೇ 6 – 7, 2017

ಸ್ಥಳ: Tumbalong Park, Darling Harbour, Sydney, NSW

For further information visit
http://www.nantien.org.au/en/events/buddhas-birthday-festival

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.